ಅಧ್ಯಕ್ಷರು.—ಹಕ್ಕುಚ್ಯುತಿ ನೋಟಿಸು ಕೊಡಿ,

ಶ್ರೀ ಸಿ. ಬೈರೇಗೌಡ.—ಅಯಿತು ಕೊಡುತ್ತೇನೆ.

ಅಧ್ಯಕ್ಷರು.—ಕೊಡಿ.

ಶಾಸನ ರಚನಾ ಕಾರ್ಯ ಕಲಾಪಗಳು

೧೯೯೦ನೇ ಇಸವಿಯ ಕರ್ನಾಟಕ ಜಿಲ್ಲಾ ಪರಿಷತ್ತು ತಾಲ್ಲೂಕು ಪಂಚಾಯತ್ ಸಮಿತಿ ಮಂಡಲ್ ಪಂಚಾಯತ್ ಮತ್ತು ನ್ಯಾಯ ಪಂಚಾಯತ್ (ತಿದ್ದುಪಡಿ) ವಿಧೇಯಕ

ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಬಿ. ಬಸವಲಿಂಗಪ್ಪ(ಮಾನ್ಯ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಸಚಿವರು).—ಮಾನ್ಯ ಅಧ್ಯಕ್ಷರೇ ನಾನು ''೧೯೯೦ರ ಕರ್ನಾಟಕ ಜಿಲ್ಲಾ ಪರಿಷತ್ತು ತಾಲ್ಲೂಕು ಪಂಚಾಯತ್ ಸಮಿತಿ ಮಂಡಲ್ ಪಂಚಾಯತ್ ಮತ್ತು ನ್ಯಾಯ ಪಂಚಾಯತ್ (ತಿದ್ದುಪಡಿ) ಮಸೂದೆಯನ್ನು ಮಂಡಿಸಲು ಅನುಮತಿ ನೀಡಬೇಕೆಂದು ಕೇಳಿಕೊಳ್ಳುತ್ತೇನೆ.''

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ ''೧೯೯೦ರ ಕರ್ನಾಟಕ ಜಿಲ್ಲಾ ಪರಿಷತ್ತು ತಾಲ್ಲೂಕು ಪಂಚಾಯತ್ ಸಮಿತಿಗಳ ಮಂಡಲ್ ಪಂಚಾಯತ್ ಮತ್ತು ನ್ಯಾಯ ಪಂಚಾಯತ್ (ತಿದ್ದುಪಡಿ) ಮಸೂದೆಯನ್ನು ಮಂಡಿಸಲು ಅನುಮತಿ ನೀಡುವುದು.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಬಿ. ಬಸವಲಿಂಗಪ್ಪ (ಮಾನ್ಯ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಸಚಿವರು) —ಮಾನ್ಯ ಅಧ್ಯಕ್ಷರೇ ''೧೯೯೦ರ ಕರ್ನಾಟಕ ಜಿಲ್ಲಾ ಪರಿಷತ್ತು ತಾಲ್ಲೂಕು ಪಂಚಾಯತ್ ಸಮಿತಿಗಳು ಮತ್ತು ನ್ಯಾಯ ಪಂಚಾಯತ್ ಸಮಿತಿಗಳ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ''.

ಅಧ್ಯಕ್ಷರು.—ವಿಧೇಯಕವನ್ನು ಮಂಡಿಸಲಾಗಿದೆ *

೧೯೯೦ನೇ ಇಸವಿಯ ಕರ್ನಾಟಕ ಜಿಲ್ಲಾ ಪರಿಷತ್ತು ತಾಲ್ಲೂಕು ಪಂಚಾಯತ್ ಸಮಿತಿ ಮಂಡಲ್ ಪಂಚಾಯತ್ ಮತ್ತು ನ್ಯಾಯ ಪಂಚಾಯತ್ (ತಿದ್ದುಪಡಿ) ವಿಧೇಯಕ

ಪರ್ಯಾಲೋಚನಾ ಪ್ರಸ್ತಾಪ

ಶ್ರೀ ಬಿ. ಬಸವಲಿಂಗಪ್ಪ (ಮಾನ್ಯ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಸಚಿವರು).—ಮಾನ್ಯ ಅಧ್ಯಕ್ಷರೇ ನಾನು ೧೯೯೦ನೇ ಇಸವಿಯ ಕರ್ನಾಟಕ ಜಿಲ್ಲಾ ಪರಿಷತ್ತು ತಾಲ್ಲೂಕು ಪಂಚಾಯತ್ ಸಮಿತಿ ಮಂಡಲ್ ಪಂಚಾಯತ್ ಮತ್ತು ನ್ಯಾಯ ಪಂಚಾಯತ್ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾಪವನ್ನು ಮಂಡಿಸಲಾಯಿತು

x x x

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೇ, ಈಗ ನಮ್ಮ ಸರ್ಕಾರದವರು ಈಗ ಪರಿವರ್ತನೆ ಪಂಚಾಯತ್‌ಗಳ ಚುನಾವಣೆ ಬಗ್ಗೆ ಒಂದು ನಿಲುವು ತೆಗೆದುಕೊಂಡಿದ್ದಾರೆ. ಇದು ಮಾನ್ಯ ಸದಸ್ಯರೆಲ್ಲರಿಗೂ ಗೊತ್ತು. ನಿನ್ನೆಯ ದಿವಸ ಸಹ ಇದೇ ರೀತಿಯ ಬಿಲ್ ಒಂದನ್ನು ತಾವು ಒಪ್ಪಿ ಕೊಂಡಿದ್ದೀರಿ ಹಾಗೂ ಅದನ್ನು ಪಾಸ್ ಮಾಡಿ ಕೊಟ್ಟಿದ್ದೀರಿ. ಅದೇ ರೀತಿ ಈ ಒಂದು ಆಕ್ಟ್ ಕೆಳಗೆ ಈ ಒಂದೂ ತಿದ್ದುಪಡಿ ಬೇಕಾಗಿದೆ. ತಾವು ದಯವಾಡಿ ತಾವು ಇದನ್ನು ಒಪ್ಪಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

---

* Annexure

† ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ).—ಮಾನ್ಯ ಅಧ್ಯಕ್ಷರೇ, ನನ್ನೆ ಸಚಿವರು ಒಂದು ಬಿಲ್ ತಂದಿದ್ದರು. ಕಾರ್ಪೊರೇಷನ್ ಆಕ್ಟ್‌ಗೆ ಅಮೆಂಡ್‌ಮೆಂಟ್ ತಂದಿದ್ದರು. ಅದನ್ನು ನಾವು ವಿರೋಧ ಮಾಡಿದ್ದೇವೆ. ಅದಾದ ಮೇಲೆ ಮಾನ್ಯ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಸಚಿವರು ಒಂದು ಹೆಜ್ಜೆ ಮುಂದೆ ಹೋಗಿ ಇವತ್ತು ಈ ತಿದ್ದುಪಡಿ ವಿಧೇಯಕ ತಂದಿದ್ದಾರೆ. ಇದು ಕೇವಲ ಬ್ಲಾಂಕೀಟ್ ಪವರ್‌ನ್ನು ಸರ್ಕಾರ ತೆಗೆದುಕೊಳ್ಳುವ ಬಿಲ್ ಅಲ್ಲ. ಇದರಲ್ಲಿ ಇನ್ನು ಹೆಚ್ಚಿನ ಎಕ್ಸಟ್ರಾ ಕಾನ್‌ಸ್ಟ್ಯೂಷನ್ ಇದೆ. ಈ ಕರ್ನಾಟಕ ಜಿಲ್ಲಾ ಪರಿಷತ್ತು, ತಾಲ್ಲೂಕು ಪಂಚಾಯತ್ ಸಮಿತಿಗಳು ಮಂಡಲ್ ಪಂಚಾಯಿತ್ ಮತ್ತು ನ್ಯಾಯ ಪಂಚಾಯಿತ್ ಸಮಿತಿಗಳ (ತಿದ್ದುಪಡಿ) ವಿಧೇಯಕ ೧೯೯೦ಕ್ಕೆ. ಈಗ ಏನು ಒಂದು ತಿದ್ದುಪಡಿ ತಂದಿರುವುದು ಇದೆ. ಈ ಮಸೂದೆಗೆ ಸೆಕ್ಷನ್ ೨೭೨ ಏನು ಇದೆ ಅದಕ್ಕೆ ೨೭೨ 'ಎ' ಎಂದು ಸೇರಿಸುವುದು. ಅದಕ್ಕೆ ಒಂದು ಅಮೆಂಡ್‌ಮೆಂಟ್ ತಂದಿದ್ದಾರೆ. ಅದೇನೆಂದರೆ..... .....Subject to the control and supervision of the Government and it shall be lawful for the government to issue directions regarding all matters connected with the election including directions for postponement of the poll. ನಾನು ಏನು ಕೇಳುತ್ತೇನೆಂದರೆ ಸೆಕ್ಷನ್ ೨೭೨ಕ್ಕೆ ಏನು ರೆಲೆವೆನ್ಸ್ ಇದೆ. ಈ ಸೆಕ್ಷನ್‌ಗೆ ಅಮೆಂಡ್‌ಮೆಂಟ್ ತರುತ್ತಿದ್ದಾರೆ. ಆ ಸೆಕ್ಷನ್‌ನಲ್ಲಿ ಏನಿದೆ ಎಂದರೆ, "Power to appoint administrator in certain cases." "(1) Whenever,—

(a) any general election to a Mandal Panchayat or Zilla Parishad under this Act or any proceedings consequent thereon have been stayed by an order of a competent court or authority"

ಸೆಕ್ಷನ್ ೨೭೨ 'ಎ' ಎಂದು ತರುತ್ತಿದ್ದಾರೆ. ಚುನಾವಣೆ ಮಾಡಿಂವ ಅಧಿಕಾರವನ್ನು ಇದರಲ್ಲಿ ಸಂಪೂರ್ಣವಾಗಿ ತಮ್ಮ ಹಿಡಿತದಲ್ಲಿಟ್ಟುಕೊಳ್ಳುವುದಕ್ಕೆ ಈ ಒಂದು ತಿದ್ದುಪಡಿ ಮಸೂದೆಯನ್ನು ಏನು ತರುತ್ತಿದ್ದೀರಿ, ಡೈರೆಕ್ಷನ್ ಕೊಡುವಂತಹ ವಿಚಾರ ತಾವೇನು ಪ್ರಾಡುತ್ತಿದ್ದೀರಿ, ರಿಲೆವೆನ್ಸ್ ಏನು ಇದೆ ? ಈ ಅಮೆಂಡ್‌ಮೆಂಟ್‌ಗೆ ಸಂಪೂರ್ಣ ವಿರೋಧ ನಮ್ಮದು ಇದೆ. ಇದನ್ನು ತರಾವಾಗ ತಾವು ಯೋಚನೆ ಮಾಡಬೇಕಾಗಿತ್ತು. ನೀವು ಕರ್ನಾಟಕ ರಾಜ್ಯ ಮಂಡಲ್ ಪಂಚಾಯತ್ ಆಕ್ಟ್ ಏನು ಇದೆ, ಅದರ ಕಾನ್‌ಸ್ಟಿಟ್ಯೂಶನಲ್ ಸೆಕ್ಷನ್ ೫ಕ್ಕೆ ತಿದ್ದುಪಡಿ ತರಬೇಕಾಗಿತ್ತು. ಆದರೆ ಇದಕ್ಕೆ ಏನು ರಿಲೆವೆನ್ಸ್ ಇದೆ ?

ಆದರೆ ಯಾವ ತರಹದ ರೆಲೆವೆನ್ಸ್ ಇಲ್ಲಿ ಕಾಣುತ್ತಿಲ್ಲ, ಈ ಒಂದು amendment "Constitution of Mandal Panchayats" Section-5 ರಲ್ಲಿ ಮಾಡಿದ್ದರೆ ಸರಿ ಇರುತ್ತಿತ್ತು. I can understand if you bring this amendment under Section-5, though I am opposing the amendment basically Section 272ಕ್ಕೆ ಇಲ್ಲಿ ನೀವು ಈ ಒಂದು ಅಮೆಂಡ್‌ಮೆಂಟ್ ತಂದರೆ, there is no relevancy. ಈಗ ೨೭೨ಕ್ಕೆ ಏನು ಅಮೆಂಡ್‌ಮೆಂಟ್ ಮಾಡಲಿಕ್ಕೆ ಹೊರಟಿದ್ದೀರಿ ಅದಕ್ಕೆ ಯಾವುದೇ ತರಹದ ರೆಲೆವೆನ್ಸ್ ಇಲ್ಲವೆಂದು ನಾನು ಹೇಳುತ್ತಿದ್ದೇನೆ. ಅದೇ ಪ್ರಕಾರ ಜಿಲ್ಲಾಪರಿಷತ್ ಕಾನ್ಸ್‌ಟ್ಯೂಷನ್ ಎಸ್ಟಾಬ್ಲಿಷ್‌ಮೆಂಟ್ and ಕಾನ್ಸ್‌ಟ್ಯೂಷನ್ ಆಫ್ ಜಿಲ್ಲಾಪರಿಷತ್‌ನಲ್ಲಿ ಏನಿದೆ. ಅಲ್ಲಿ ಸೆಕ್ಷನ್ ೧೫೦ ಕ್ಕೆ ರೆಲೆವೆನ್ಸ್ ಆಗುತ್ತದೆ. ನಿನ್ನೆ ದಿವಸ ನಾನು ಕೆಲವೊಂದು ವಿಚಾರಗಳನ್ನು ಹೇಳಿದ್ದೇನೆ. ಈಗ ಅದೇ ವಿಚಾರವನ್ನು ಹೇಳುವ ಅವಶ್ಯಕತೆ ಇಲ್ಲ. ಆದರೆ, ಇವತ್ತು ಏನು ಕಾಣಿಸುತ್ತದೆ ಎಂದರೆ ಸರ್ಕಾರ ಇವತ್ತು ಜಿಲ್ಲಾಪರಿಷತ್ತುಗಳನ್ನು ಮುಚ್ಚಬೇಕು ಎನ್ನುವ ಅಭಿಪ್ರಾಯಕ್ಕೆ ಬಂದಿದೆ. ಕೇಂದ್ರದಲ್ಲಿ ನಮ್ಮ ಸರ್ಕಾರ ಇದ್ದಾಗ ನೀವು ಹೇಳಿದ್ದು, ನಮ್ಮ ಅಧಿಕಾರ ವಿಕೇಂದ್ರೀಕರಣದಲ್ಲಿ ವಿಶ್ವಾಸ ಇದೆಯೆಂದು ಈ ವ್ಯವಸ್ಥೆಯಲ್ಲಿ ವಿಶ್ವಾಸ ಇದೆಯೆಂದು ಹೇಳಿದ್ದೀರಿ, ಮಾನ್ಯ ಮುಖ್ಯ ಮಂತ್ರಿಗಳೂ ಹೇಳಿದ್ದಾರೆ. ನಾವೂ ಅದನ್ನು ಒಪ್ಪಿಕೊಂಡಿದ್ದೇವೆ. ಏಕೆಂದರೆ ಅದರಲ್ಲಿ ವಿಶ್ವಾಸ ಇಡಬೇಕಾಗುತ್ತದೆ. ಆದರೆ ಮಾನ್ಯ ಸಚಿವರು ಯಾವ ಪ್ರಕಾರ ಹೊರಟಿದ್ದಾರೆಂದು ನೋಡಿದರೆ, ಇವತ್ತು ಕ್ರಮೇಣ ಜಿಲ್ಲಾ ಪರಿಷತ್ತುಗಳನ್ನು ಇನ್‌ಕ್ಯಾಪಿಟೆಂಟ್ ಮಾಡಲಿಕ್ಕೆ ತಾವು ಹೊರಟಿದ್ದೀರಿ. ಇವತ್ತು ರೂಲ್ಸ್ ಪ್ರಕಾರ Conduct of Elections to Zill Parishads and Mandal Panchayats, Rule 3 reads thus:

"Election to the Zilla Parishads and Mandal Panchayats shall be conducted under the superintendence, direction and control of the Chief Electoral Officer,"

Today what have you done ? You have taken the power from the Chief Electoral Officer to the Government. Further, Clause : 2. reads thus :

"Subject to the superintendence direction and control of the Chief Electoral Officer, the Deputy Commissioner shall co-ordinate and supervise all the work in the district."

What are you doing here? Not only control, but also giving directions and all supervision powers you have withdrawn. ಇವತ್ತು ರೂಲ್ ಪ್ರಕಾರ ಇಂಥಾ ಅಧಿಕಾರ ಚೀಫ್ ಎಲೆಕ್ಟೋರಲ್ ಆಫೀಸರ್ಸ್‌ಗಳಿಗೆ ಈಗಾಗಲೇ ಇದೆ. ನಿಮ್ಮ ಇನ್‌ಟೆನ್‌ಷನ್ ಪ್ರಕಾರ ನೀವು ಏನು ಹೇಳಬಹುದು? ಚುನಾವಣೆ ಕ್ಯಾನ್ಸಲ್ ಮಾಡಲಿಕ್ಕೆ ಅಥವಾ ಮುಂದೆ ಹಾಕುವುದಕ್ಕೆ ಪ್ರಾವಿಷನ್ ಅವರಿಗೆ ಇಲ್ಲವೆಂದು ನೀವು ಹೇಳಬಹುದು. ಹಾಗಿದ್ದರೆ ಅಷ್ಟಕ್ಕೆ ಸೀಮಿತವಾಗಿ ತಾವು ಏಕೆ ಅಮೆಂಡ್‌ಮೆಂಟ್ ತೆಗೆದುಕೊಂಡು ಬಂದಿಲ್ಲ ? ಇವತ್ತು ರೂಲ್ ೨೯ ರಲ್ಲಿ

"Adjournment of Poll in emergency" ಎಂದು ಇದೆ.

Rule : 29 says:—

"If at any election the proceedings at any polling station are interrupted or obstructed by riot or open violence or if at an election it is not possible to take poll at any polling station on account of natural calamity or on any other sufficient cause, the Presiding Officer of such polling station may adjourn the poll".

So, already there is a provision, ಈಗ ನಿಮ್ಮ ಸ್ಟೇಟ್‌ಮೆಂಟ್ ಆಫ್ ಆಬ್ಜೆಕ್ಟ್ಸ್ ಅಂಡ್ ರೀಜನ್ಸ್‌ನಲ್ಲಿ ನೀವು ಏನೇನು ಕೊಟ್ಟಿದ್ದೀರಿ. ೨೫ನೇ ತಾರೀಖು ಚುನಾವಣೆ ಮುಗಿಯಬೇಕಾಗಿತ್ತು. ಆದರೆ ಇದನ್ನು ಮಾಡಲಿಕ್ಕಾಗಲಿಲ್ಲ. ಆದ್ದರಿಂದ ಈ ಪ್ರಸೂಪೆ ತಂದಿದ್ದೇವೆಂದು ಹೇಳಿದ್ದೀರಿ. ಹಾಗಾದರೆ ಈಗಾಗಲೇ ಒಂದು ಪ್ರಾವಿಷನ್ ಇದ್ದಾಗ 'Strike' was the reason ಸರ್ಕಾರಿ ನೌಕರರು ಏನು ಮುಷ್ಕರ ಮಾಡಿದ್ದರೋ ಆದ್ದರಿಂದ ಚುನಾವಣೆ ಮುಂದೆ ಹಾಕಿದ್ದೇವೆಂದು ತಾವು ಹೇಳಿದ್ದೀರಿ. ಅದೇ ಕಾರಣದಿಂದ ಪ್ರಿಸೈಡಿಂಗ್ ಆಫೀಸರ್ ಅವರು ಈ ಚುನಾವಣೆಯನ್ನು ಮುಂದೆ ಹಾಕಲಿಕ್ಕೆ ಆಗುತ್ತಿತ್ತು. ಹೀಗಾಗಿ ಇವತ್ತು ಪ್ರತಿಯೊಂದು ಹೆಜ್ಜೆಯಲ್ಲಿ ಜಿಲ್ಲಾಪರಿಷತ್ತಿನ ಮೇಲೆ ಗದಾ ಪ್ರಹಾರ ಆಗುತ್ತಿದೆ. ಮಾನ್ಯ ಅಧ್ಯಕ್ಷರೇ, ತಮ್ಮ ಮೂಲಕ ನಾನು ಏನಂತಿ ಮಾಡಿಕೊಳ್ಳುತ್ತೇನೆ. ಒಂದು ವೇಳೆ ಈ ವ್ಯವಸ್ಥೆಯಲ್ಲಿ ವಿಶ್ವಾಸ ಇಲ್ಲವೆಂದರೆ ಸ್ಪಷ್ಟವಾಗಿ ಹೇಳಿ. ಈ ವ್ಯವಸ್ಥೆಯಲ್ಲಿ ನಮ್ಮ ವಿಶ್ವಾಸ ಇಲ್ಲ, ಅಧಿಕಾರ ವಿಕೇಂದ್ರೀಕರಣದಲ್ಲಿ ವಿಶ್ವಾಸ ಇಲ್ಲ. ಆದ್ದರಿಂದ ನಾವು ಇದನ್ನು ಮುಚ್ಚಿಬಿಡುತ್ತೇವೆಂದು ಹೇಳಿ. ಒಂದು ಕಡೆ ಜಿಲ್ಲಾಪರಿಷತ್ತಿನ ವೈಸ್ ಪೆಸಿಡೆಂಟ್ ಪೋಸ್ಟ್‌ಗಳನ್ನು ಅಬಾಲಿಷ್ ಮಾಡುತ್ತೇವೆಂದು ಹೇಳುತ್ತೀರಿ. ಹಾಗಾದರೆ, ಡೆಪ್ಯುಟಿ ಸ್ಪೀಕರ್ ಏಕೆ? ಡೆಪ್ಯುಟಿ ಛೇರ್ಮನ್ ಏಕೆ, ವೈಸ್ ಪ್ರೆಸಿಡೆಂಟ್ ಆಫ್ ಇಂಡಿಯಾ ಏಕೆ ಬೇಕು? ಆಂದರೆ, ಜಿಲ್ಲಾಪರಿಷತ್ತಿನಲ್ಲಿ ನಿಮಗೆ ವಿಶ್ವಾಸ ಇಲ್ಲವೆಂದರೆ, ಅಲ್ಲಿರುವ ಅಧ್ಯಕ್ಷೆ ಮತ್ತು ಉಪಾಧ್ಯಕ್ಷರ ಹಾಗೂ ಸದಸ್ಯರುಗಳಿಗೆ, ನಿಮ್ಮ ಪಕ್ಷದವರೇ ಇರಬಹುದು, ನಮ್ಮ ಪಕ್ಷದವರೇ ಇರಬಹುದು, ಅವರಲ್ಲಿ ಯಾವ ಇಂಟಗ್ರಿಟಿ ಇಲ್ಲ ಎಂದು ನಿಮ್ಮ ಅಭಿಪ್ರಾಯ ಬಂದ ಹಾಗಾಯಿತು. ಮತ್ತೆ ಇಲ್ಲಿ ರಾಜ್ಯ ಮಟ್ಟದಲ್ಲಿ ಎಲ್ಲರೂ ಪ್ರಾಮಾಣಿಕರು ಎಂದು ಹೇಳಿದ ಹಾಗಾಯಿತು. ಇವರು ಎಷ್ಟು ಮುಂದೆ ಹೋಗಿದ್ದಾರೆಂದರೆ ಚೀಫ್ ಸೆಕ್ರೆಟರಿ has to work under the control of the President ಅವರಿಗೆ ರಜಾ ಮಂಜೂರು ಮಾಡಬೇಕಾದರೂ ಅಧ್ಯಕ್ಷರು ಮಾಡಬೇಕಾಗುತ್ತದೆ.

ಆದರೆ ಮಾನ್ಯ ಸಚಿವರು ಇವೊತ್ತು ಹೇಳುತ್ತಿದ್ದಾರೆ, ಏನೆಂದರೆ, ಆ ಅಧಿಕಾರ ಅಧ್ಯಕ್ಷರಿಗೆ ಇಲ್ಲ, ಆರ್ಡಿಪಿ ಸೆಕ್ರೆಟರಿಯವರು ಮಾನ್ಯತೆ ಮಾಡಿದರೆ ರಜೆ ಮೇಲೆ ಹೋಗಬಹುದು ಎಂದು ಹೇಳಿದ್ದಾರೆ. ಮಾನ್ಯ ಸಚಿವರು ಏಕೆ ಹೀಗೆ ಮಾಡಿದ್ದಾರೆ ಎಂದು ನನಗೆ ಆಶ್ಚರ್ಯವಾಗಿದೆ. ಅವರು ಬಹಳ ಅನುಭವಸ್ಥರೂ ಹಿರಿಯರೂ ಆಗಿದ್ದಾರೆ. ಇವೊತ್ತು ಯಾವುದೋ ಕಾರಣಗಳನ್ನು ಮುಂದಿಟ್ಟು ಈ ವ್ಯವಸ್ಥೆಯನ್ನೇ ಮುಚ್ಚಲಿಕ್ಕೆ ಹೋದರೆ ಬಹಳ ತೊಂದರೆಯಾಗುತ್ತವೆ. ಈ ಒಂದು ತಿದ್ದುಪಡಿ ಮಸೂದೆಯಲ್ಲಿ ಇವೊತ್ತು ಇಷ್ಟೊಂದು ಅಧಿಕಾರವನ್ನು ನೀವೇ ಇಟ್ಟುಕೊಂಡರೆ ಮುಂದೆ ಸರಕಾರ ತನಗೆ ಮನಸ್ಸು ಬಂದಾಗ ಚುನಾವಣೆಯನ್ನು ನಡೆಸಬಹುದು ಅಥವಾ ಬಿಡಬಹುದು. ನೀವು ಚುನಾವಣೆಯನ್ನು ಸಕಾಲದಲ್ಲಿ ಮಾಡುತ್ತೀರಿ ಎಂಬ ಬಗ್ಗೆ ಏನು ಗ್ಯಾರಂಟಿ ಇದೆ? ನಿಮಗೆ ರೂಲ್ 210 ರ ಪ್ರಕಾರ ಅಧಿಕಾರ ಇದೆ ಎಂದು ನಾನೂ ಕೂಡ ಹೇಳಿದ್ದೇನೆ. ನಿಮ್ಮ ದೃಷ್ಟಿಯಿಂದಲೇ ನಿಮ್ಮ ಕಾನೂನು ತಜ್ಞರು ಅಭಿಪ್ರಾಯವನ್ನು ಕೊಟ್ಟರೆ ಸ್ಪಷ್ಟ ನಿಲುವನ್ನು ನೀವು ಕೊಡಬಹುದಾಗಿತ್ತು. ಏನೆಂದರೆ ಚುನಾವಣೆಯನ್ನು ಮುಂದಕ್ಕೆ ಹಾಕಿದರೂ ಸಹ, ಮುಂದಿನ ತಿಂಗಳಲ್ಲಿ ಮಾಡುತ್ತೇವೆ ಎಂದು ಇದರ ಪ್ರಕಾರ ಇನ್ಡೆಫಿನೆಟ್ ಆಗಿ ನೀವು ಚುನಾವಣೆಯನ್ನು ಮುಂದಕ್ಕೆ ಹಾಕಬಹುದು. ಹೀಗೆ ಚುನಾವಣೆಯನ್ನು ನಾಲ್ಕಾರು ಸಾರಿ ಮುಂದಕ್ಕೆ ಹಾಕಿದರೂ ನಿಮ್ಮನ್ನು ಕೇಳುವವರು ಯಾರು? ಈ ಆರ್ಡಿನೆನ್ಸ್ ೧೫ನೇ ತಾರೀಖಿನಿಂದ ಎಫೆಕ್ಟಿವ್ ಆಗಿದೆ ಎಂದು ಹೇಳುತ್ತಿದ್ದೀರಿ. ಆದರೆ ೧೫ನೇ ತಾರೀಖಿನಂದು ಚುನಾವಣೆ ಕ್ಯಾನ್ಸಲ್ ಮಾಡಿದ್ದೇವೆ ಎಂದು ಹೇಳಿಕೆ ಬಂದಿದೆ. ಚುನಾವಣೆಯನ್ನು ಮುಂದಕ್ಕೆ ಹಾಕಿದ್ದೇವೆ ಎಂದು ಹೇಳಿದ್ದೀರಿ. ಹಾಗಾದರೆ ನಿಮಗೆ ಈ ಅಧಿಕಾರ ಎಲ್ಲಿಂದ ಬಂತು ? ತಾವುಗಳು ಯಾವ ಅಧಿಕಾರದಿಂದ ೧೫ನೇ ತಾರೀಖಿನಂದು ಈ ಮಾತನ್ನು ಹೇಳಿದ್ದೀರಿ ? ಹಾಗೆ ಹೇಳಲು ಅಧಿಕಾರವನ್ನು ನಿಮಗೆ ಯಾರು ಕೊಟ್ಟರು ? ಚುನಾವಣೆಯನ್ನು ಮುಂದಕ್ಕೆ ಹಾಕುವೆ ನೋಟಿಫಿಕೇಷನ್ ಯಾವಾಗ ಹೊರಡಿಸಿದ್ದೀರಿ ಅಂದರೆ ನೀವು ಪತ್ರಿಕಾ ಹೇಳಿಕೆಯಲ್ಲಿ ಹೇಳಿದ್ದು ಸರಿ ಅಲ್ಲ ಅಥವಾ ನೀವು ನೋಟಿಫಿಕೇಷನ್ ಆ ದಿವಸ ಹೊರಡಿಸಿಲ್ಲ ಇಲ್ಲಿ ಈಗಾಗಲೇ ಅಧಿಕಾರವು ಚೀಫ್ ಇಲೆಕ್ಟೋರಲ್ ಆಫೀಸರ್‌ಗೆ ಇದೆ. ಅವರ ಡೈರೆಕ್ಷನ್ಸ್ ಕೆಳಗೆ, ಅವರ ಕಂಟ್ರೋಲ್ ಕೆಳಗೆ ಚುನಾವಣೆಗಳು ನಡೆಯಬೇಕಾಗಿದೆ ಆದರೂ ನಿಯಮಗಳನ್ನು ಉಲ್ಲಂಘಿಸಿ ನೀವು ಚುನಾವಣೆಯನ್ನು ಮುಂದಕ್ಕೆ ಹಾಕಿದ್ದೀರಿ. ನಿಮಗೆ ಆ ಅಧಿಕಾರ ಇದೆಯೇ ? ಹೀಗಿರುವಾಗ ಇಷ್ಟಕ್ಕೆ ಸೀಮಿತವಾಗಿ ಒಂದು ತಿದ್ದುಪಡಿಯನ್ನು ತರಬೇಕಾಗಿತ್ತು. ಅದನ್ನು ಬಿಟ್ಟು ಸಂಪೂರ್ಣ ಅಧಿಕಾರವನ್ನು ತೆಗೆದುಕೊಂಡು ತಾವು ಡಿಕ್ಟೇಟರ್‌ಶಿಪ್ ಮಾಡುತ್ತಾ ಇದ್ದೀರಿ. ಆದಂದರಿಂದ ಈ ಬಿಲ್‌ಗೆ ನನ್ನ ಸಂಪೂರ್ಣವಾದ ವಿರೋಧ ಇದೆ. ಮಾನ್ಯ ಸಚಿವರು ಈ ಬಿಲ್ಲನ್ನು ವಿಥ್‌ಡ್ರಾ ಮಾಡಿಕೊಳ್ಳಬೇಕೆಂದು ವಿನಂತಿಸಿಕೊಳ್ಳುತ್ತೇನೆ. ಹೀಗೆ ತಮ್ಮ ವಂಸಸ್ಸಿಗೆ ಬಂದಾಗ ಚುನಾವಣೆ ನಡೆಸುವುದು ಅಥವಾ ಬಿಡುವುದು ಏನಿದೆ. ಈ ರೀತಿ ಮಾಡಿದರೆ ಅದು ಯಾವ ಸರ್ಕಾರಕ್ಕೂ ಯಾವ ಪಕ್ಷಕ್ಕೂ ಶೋಭೆ ತರುವುದಿಲ್ಲ ಎಂದು ಹೇಳಿ ಬಿಲ್‌ಗೆ ವಿರೋಧವನ್ನು ಸೂಚಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಅಧ್ಯಕ್ಷರೆ, ಈ ಕರ್ನಾಟಕ ಜಿಲ್ಲಾ ಪರಿಷತ್, ತಾಲ್ಲೂಕು ಪಂಚಾಯಿತ್ ಸಮಿತಿ ವಿಧೇಯಕಕ್ಕೆ ಏನು ತಿದ್ದುಪಡಿ ಬಿಲ್‌ನ್ನು ಸನ್ಮಾನ್ಯ ಸಚಿವರು ತಂದಿದ್ದಾರೆ, ಇದೇ ಹಿನ್ನಲೆಯಲ್ಲಿ ನಿನ್ನೆ ಕಾರ್ಪೊರೇಷನ್ ಚುನಾವಣೆಯನ್ನು ಮುಂದೂಡುವುದಕ್ಕೆ ತಂದ ತಿದ್ದುಪಡಿ ಬಿಲ್‌ಗೂ ಇದಕ್ಕೂ ಏನೂ ವ್ಯತ್ಯಾಸ ಇಲ್ಲ. ಆ ಬಗ್ಗೆ ಈಗಾಗಲೇ ಸಾಕಷ್ಟು ಚರ್ಚೆಯಾಯಿತು. ಆದರೆ ಸನ್ಮಾನ್ಯ ಹಿರಿಯರೂ, ಅನುಭವಸ್ಥರೂ ಆದ ಸಚಿವರು ಅನೇಕ ವಿಷಯಗಳ ಬಗ್ಗೆ ತಮಗೆ ಸರಿ ಕಂಡಂಥಾದ್ದನ್ನು ಹೇಳುವಂಥ ವಾತಾವರಣ ಇದೆ. ಅದನ್ನು ಕೆಲವು ದೃಷ್ಟಿಯಿಂದ ನಾನು ಅದನ್ನು ಸ್ವಾಗತ ಮಾಡುತ್ತೇನೆ ಆದರೆ ಅನೇಕ ಸಂದರ್ಭಗಳಲ್ಲಿ ಈ ರೀತಿಯಾಗಿ ಅದು ಸರಿ ಅಲ್ಲ ಎಂದು ಕಂಡಾಗ ಸ್ಪಷ್ಟವಾಗಿ ತಮ್ಮ ಅಭಿಪ್ರಾಯಗಳನ್ನು ಹೇಳುವಂಥ ತಮ್ಮಂಥ ಹಿರಿಯ ಸಚಿವರು ಈ ರೀತಿಯಾಗಿ ಕಾನೂನು ಬಾಹಿರವಾಗಿ ಚುನಾವಣೆಯನ್ನು ಮುಂದೂಡುವಂತಹ ಒಂದು ಸಂದರ್ಭ ಬಂದಾಗ ಚುನಾವಣೆಯನ್ನು ರದ್ದು ಮಾಡಿದ್ದೇವೆ ಎಂದು ಹೇಳುವಂಥ ಧೈರ್ಯವನ್ನು ನೀವು ಮಾಡಬಹುದಾಗಿತ್ತು. ಏಕೆಂದರೆ ಒಂದು ಸಾರಿ ಸರಕಾರಿ ನೌಕರರು ಧರಣಿ ಕೈಗೆತ್ತಿಕೊಂಡ ಕಾರಣ ಚುನಾವಣೆಯನ್ನು ಮುಂದಕ್ಕೆ ಹಾಕಿದ್ದೇವೆ ಎಂದು ಮುಖ್ಯಮಂತ್ರಿಯವರು ೧೭ನೇ ತಾರೀಖು ಪತ್ರಿಕೆಯಲ್ಲಿ ಹೇಳಿಕೆ ಕೊಟ್ಟರು. ಆಗ ನಾವುಗಳು ಹಾಗೂ ಬೇರೆ ಬೇರೆ ವಿರೋಧ ಪಕ್ಷದವರು ಚುನಾವಣೆ ಆಗಲೇಬೇಕೆಂದು ಧರಣಿ ಸತ್ಯಾಗ್ರಹವನ್ನು ಮಾಡಿದಾಗ ಮುಖ್ಯಮಂತ್ರಿಗಳು ಏನು ಹೇಳಿದ್ದಾರೆಂದರೆ, ನಾವು ಏನು ಮಾಡಬಲ್ಲೆವೆ ಎಂಬುದನ್ನು ಅರ್ಥ ಮಾಡಿಕೊಳ್ಳದೆ ಧರಣಿ ಸತ್ಯಾಗ್ರಹ ಇತ್ಯಾದಿ ಮಾಡುತ್ತಾರೆ ಎಂದು ನಮ್ಮ ಮೇಲೆಯೇ ಆರೋಪ ಹೊರಿಸುವ ಸಾಹಸವನ್ನು ಸಹ ಮಾಡಿದರು ಒಂದು ವಿಶೇಷವಾದಂಥ ಸಂದರ್ಭದಲ್ಲಿ ಚುನಾವಣೆಯನ್ನು ನಡೆಸುವುದಕ್ಕೆ ಆಗದಿದ್ದರೆ, ಚುನಾವಣೆಯನ್ನು ರದ್ದು ಮಾಡಿದ್ದೇವೆ ಮುಂದೆ ಮಾಡುತ್ತೇವೆ ಎಂದು ಹೇಳುವಂಥ ಧೈರ್ಯವನ್ನು ನೀವು ತೋರಿಸಬೇಕಾಗಿತ್ತು. ಆದರೆ ನೀವು

ಯಾವುದೋ ಇಕ್ಕಟ್ಟಿಗೆ ಸಿಲುಕಿ ಈ ರೀತಿ ಮಾಡಿದಹಾಗೆ ಕಾಣುತ್ತದೆ. ಇಂತಹ ತಿದ್ದುಪಡಿ ನಿಮ್ಮಿಂದ ಬರುತ್ತದೆಂದು ನಾವು ನಿರೀಕ್ಷಣೆ ಮಾಡಿರಲಿಲ್ಲ. ಆದಕ್ಕಾಗಿ ಈ ಬಗ್ಗೆ ನಮ್ಮ ಸ್ಪಷ್ಟ ಅಭಿಪ್ರಾಯಗಳನ್ನು ನಿನ್ನೆಯೇ ವ್ಯಕ್ತಪಡಿಸಿದ್ದೇವೆ. ಒಂದು ರೀತಿಯಲ್ಲಿ ಇವರು ಕಾಂಟ್ರವರ್ಸಿಯಲ್ ಮಿನಿಸ್ಟರ್ ಆಗಿದ್ದಾರೆ ಇದನ್ನು ಸಹ ಎದುರಿಸುವ ಶಕ್ತಿ ನಿಮಗೆ ಇದ್ದರೆ ಮಾಡಿ ಜಿಲ್ಲಾ ಪರಿಷತ್ ಬಗ್ಗೆ.....

ಶ್ರೀ ಬಿ. ಬಸವಲಿಂಗಪ್ಪ.—ನೇರವಾಗಿ ಹೇಳಿದರೆ ಕಾನ್‌ಟ್ರವರ್ಸಿಯಲ್ಲಾ ?

ಶ್ರೀ ಬಿ. ಎಸ್. ಯಡಿಯೂರಪ್ಪ.—ಅದಕ್ಕೇ ನಾನು ಹೇಳಿದ್ದು. ನಿಮಗೆ ಎದುರಿಸುವ ಶಕ್ತಿ ಯಿದ್ದರೆ ಮಾಡಿ ಎಂದು ಹೇಳುತ್ತಿದ್ದೇನೆ. ಆದರೆ ಈ ತಿದ್ದುಪಡಿ ಪರವಾಗಿ ತಾವು ಯೋಚಿಸುತ್ತೀರೆಂದು ನಾವು ನಿರೀಕ್ಷೆ ಮಾಡಿರಲಿಲ್ಲ. ಇದ್ದರಿಂದ ತಾವು ಧೈರ್ಯ ಮಾಡಿ ಇದನ್ನು ವಾಪಸ್ ತೆಗೆದು ಕೊಳ್ಳಬೇಕು. ಈಗ ಚುನಾವಣೆ ರದ್ದುಮಾಡಿ ಅನುಕೂಲ ಆದಾಗ ಚುನಾವಣೆ ಮಾಡುತ್ತೇನೆಂದು ಹೇಳಿದರೆ ಬಹುಶಃ ತಾವು ಹೇಳುವುದಕ್ಕೂ ಮತ್ತು ನಡೆದುಕೊಳ್ಳುವುದಕ್ಕೂ ಸರಿ ಹೋಗುತ್ತದೆಂದು ನಾನು ತಿಳಿದುಕೊಂಡಿದ್ದೇನೆ. ಈಗ ಈ ತಿದ್ದುಪಡಿಯನ್ನು ತಾವು ಹಿಂತೆಗೆದುಕೊಳ್ಳಬೇಕೆಂದು ಹೇಳುತ್ತಾ ನಾನಾದರೂ ಇದನ್ನು ಸಂಪೂರ್ಣವಾಗಿ ನಾನು ವಿರೋಧಮಾಡುತ್ತೇನೆ.

† ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ (ಗುರುಮಿಟ್‌ಕಲ್).—ಮಾನ್ಯ ಅಧ್ಯಕ್ಷರೇ, ಈ ತಿದ್ದುಪಡಿಯನ್ನು ಅನುಮೋದಿಸಿ ನಾನು ಒಂದೆರಡು ಸಲಹೆಗಳನ್ನು ಕೊಡಬಯಸುತ್ತೇನೆ. ಮೊದಲನೆದಾಗಿ ಇದರ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ನಿನ್ನೆ ತಂದಿದ್ದ ಇದೇರೀತಿಯ ತಿದ್ದುಪಡಿಗೆ ಎಲ್ಲರೂ ಒಪ್ಪಿಗೆ ಕೊಟ್ಟಿದ್ದಾರೆ. ಈ ಜಿಲ್ಲಾಪರಿಷತ್ ಮತ್ತು ಮಂಡಲ ಪಂಚಾಯ್ತಿ ಚುನಾವಣೆಯನ್ನು ನಾವು ಮಾಡ ಬೇಕಾದ ಅವಶ್ಯಕತೆ ಇರಲಿಲ್ಲವೆಂದು ನನ್ನ ಸಲಹೆ. ಅದಕ್ಕೆ ಕಾರಣವಿಷ್ಟೆ. ೧೯ ಜಿಲ್ಲಾ ಪರಿಷತ್ ಮತ್ತು ಸುಮಾರು ೨೫೫೫ ಮಂಡಲ ಪಂಚಾಯ್ತಿಗಳು ಯಾವುದೇ ಅಡ್ಡಿ ಆತಂಕವಿಲ್ಲದೆ ಈಗ ಕೆಲಸ ಮಾಡುತ್ತಿವೆ ಈ ತಿದ್ದುಪಡಿ ಜೊತೆಗೆ ಅನೇಕ ಸಲಹೆಗಳನ್ನು ಮತ್ತು ತಿದ್ದುಪಡಿಗಳನ್ನು ನಾವು ವಿರೋಧಪಕ್ಷದಲ್ಲಿ ದ್ದಾಗ ಕೊಟ್ಟಿದ್ದೆವು. ಮತ್ತು ಖಾಸಗಿ ಬಿಲ್ಲಾಗಿ ಕೂಡ ನಾವು ಇಂಡರ್‌ಡ್ಯೂಸ್ ಮಾಡಿದ್ದೆವು. ಅದರಲ್ಲಿ ವಿಶೇಷವಾಗಿ ಈ ರೊಟೇಷನ್ ಸಿಸ್ಟಮ್ ಪ್ರಕಾರ ಜಿಲ್ಲಾ ಪರಿಷತ್ ಅಧ್ಯಕ್ಷರ ಪೋಸ್ಟ್‌ಗಳನ್ನು ಎಸ್‌ಸಿ ಎಸ್‌ಟಿಗಳಿಗೆ ರಿಸರ್ವ್ ಮಾಡಬೇಕೆಂದು ನಾನು ಹೇಳಿದ್ದೆ. ಅದನ್ನು ಇಂಟರ್‌ಡ್ಯೂಸ್ ಮಾಡಿದಾಗ ನಜೀರ್‌ಸಾಬರು ಆಮೇಲೆ ಪ್ರಕಾಶ್‌ರವರು ಇದನ್ನು ಹಿಂತೆಗೆದುಕೊಳ್ಳಬೇಕು, ನಾವೇ ಇಂಟರ್‌ಡ್ಯೂಸ್ ಮಾಡುತ್ತೇವೆ. ಯಾವ ರೀತಿಯಾಗಿ ಅಂಧ್ರದಲ್ಲಿ ಅಧ್ಯಕ್ಷ ಸ್ಥಾನಗಳನ್ನು ವಿಂಗಸಲಾಗಿ ಇಡಲಾಗಿದೆಯೋ ಅದೇ ರೀತಿ ಇಲ್ಲೂಕೂಡ ತಿದ್ದುಪಡಿ ತರುತ್ತೇವೆಂದು ಹೇಳಿದ್ದರು. ಆದರೆ ಆರೀತಿ ಕೊನೆಗೂ ತರಲಿಲ್ಲ. ಇದನ್ನೆಲ್ಲ ನೋಡಿ ಒಂದು ಸಮಗ್ರ ತಿದ್ದುಪಡಿ ತರುತ್ತೀರೆಂದು ನಾನು ತಿಳಿದಿದ್ದೆ. ಆದರೆ ಏಕೆ ತರಲಿಲ್ಲವೋ ನನಗೆ ಗೊತ್ತಾಗಲಿಲ್ಲ.

(ಶ್ರೀಮತಿ ನಾಗಮ್ಮ ಕೇಶವಮೂರ್ತಿಯವರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ಈಗಾಗಲೇ ನಾನು ಹೇಳಿದಂತೆ ರಾಜ್ಯದಲ್ಲಿರುವ ಮಂಡಲ ಪಂಚಾಯ್ತಿಗಳಲ್ಲಿ ೨೫೦೦ ಕ್ಕಿಂತ ಮೇಲ್ಪಟ್ಟು ಪ್ರಧಾನರಿದ್ದರೂ ಸಹ ಅವರಲ್ಲಿ ಎಸ್‌ಸಿಎಸ್‌ಟಿ ಜನಾಂಗದಿಂದ ೧೦೦ ಜನ ಪ್ರಧಾನರೂ ಇಲ್ಲ ಎಲ್ಲಿಯವರೆಗೆ ನೀವು ರಿಸರ್ವೇಷನ್ ಮಾಡುವುದಿಲ್ಲವೋ ಅಲ್ಲಿಯವರೆಗೆ ಒಬ್ಬರೂ ಕೂಡ ಈ ಜನಾಂಗದವರು ಪ್ರಧಾನರು ಆಗುವುದಿಲ್ಲವೆಂದು ಸ್ಪಷ್ಟವಾಗಿ ಹೇಳುತ್ತೇನೆ. ಜಿಲ್ಲಾ ಪರಿಷತ್‌ಗಳಲ್ಲಿ ಶೇಕಡ ೨೫ರಷ್ಟು ಸೀಟುಗಳನ್ನು ಮಹಿಳೆಯರಿಗೆ ವಿಂಗಸಲಿಟ್ಟಿದ್ದೇವೆ. ಡೆಲ್ಲಿಯವರು ಒಂದು ಸರ್ವೆ ಮಾಡಿದ್ದಾರೆ ಆ ಪ್ರಕಾರ ಶೇಕಡಾ ೨೫ ಸೀಟು ಒಂದೇ ಒಂದು ಜನರಲ್ ಸೀಟು ಕೂಡ ಹೆಣ್ಣುಮಕ್ಕಳಿಗಾಗಿ ಕೊಟ್ಟಿಲ್ಲ ಅಂದರೆ ಏನಾಯಿತು ? ಎಲ್ಲಿ ಕಡ್ಡಾಯವಾಗಿ ನಾವು ಕಾಯಿದೆ ಮಾಡುತ್ತೇವೋ ಆ ಕಾಯಿದೆ ಪ್ರಕಾರ ನಾವೆಲ್ಲರೂ ನಡೆದುಕೊಳ್ಳತ್ತೇವೆಯೇ ಹೊರತು ಒಂದು ಜನರಲ್ ಸೀಟನ್ನು ಹಿಂದುಳಿದವರಿಗೆ, ದುರ್ಬಲ ವರ್ಗದವರಿಗೆ ಕೊಡಬೇಕೆನ್ನುವ ಭಾವನೆ ಇಲ್ಲ. ಅಥವಾ ಒಂದು ಚೇರ್‌ಮನ್‌ಷಿಪ್‌ನ್ನು ಅವರಿಗೆ ಕೊಡಬೇಕೆನ್ನುವ ಭಾವನೆ ಇಲ್ಲ, ಒಂದು ರಿಜರ್ವ್ ಕ್ಯಾಂಡಿಡೇಟಿಗೆ ಜನರಲ್ ಸೀಟ್ ಕೊಡಬೇಕು ಎನ್ನುವ ಭಾವನೆ ಇಲ್ಲ. ಅಂದರೆ ಪ್ರತಿಯೊಂದಕ್ಕೂ ಕಡ್ಡಾಯ ಇರ ಬೇಕು ಎಂದು ಇದರ ಅರ್ಥ. ಪ್ರತಿ ಪಾರ್ಟಿಯಲ್ಲೂ ಇದು ಸಾಮಾನ್ಯ ಲಕ್ಷಣವಾಗಿದೆ. ಇಂತಹ ಸಮಸ್ಯೆಗಳ ಬಗ್ಗೆ ನಾವು ಆಲೋಚನೆ ಮಾಡಿ ಕೆಲಸ ಮಾಡುತ್ತಿಲ್ಲ ಎನ್ನುವುದು ಇದರಿಂದ ಸ್ಪಷ್ಟವಾಗಿದೆ.

೧೫೫೦ ಪಿ. ಎಂ.

ಹೆಣ್ಣು ಮಕ್ಕಳ ಬಗ್ಗೆಯಾಗಲೀ, ಷೆಡ್ಯೂಲ್ಡ್ ಕ್ಯಾಸ್ಟ್, ಷೆಡ್ಯೂಲ್ಡ್ ಟ್ರೈಬ್ಸ್ ಬಗ್ಗೆ ಯಾಗಲೀ ಯಾರೂ ಕೂಡಾ ಇವತ್ತು ಒಂದು ದೊಡ್ಡ ಮನಸ್ಸು ಮಾಡಿ ಒಂದೆರಡು ಅಧ್ಯಕ್ಷ ಸ್ಥಾನಗಳನ್ನ

ಅವರಿಗೆ ಕೊಡುತ್ತೇವೆಂದು ಯಾರೂ ಕೂಡ ತೋರಿಸಲಿಲ್ಲ. ಇವೊತ್ತು ಎಲ್ಲರೂ ಹೇಳುತ್ತೇವೆ ಕೊಡಬೇಕು ಎಂದು ಮಾತನಾಡುತ್ತೇವೆ, ಕೊಡಬೇಕು ಎಂದು ಮಾತನಾಡಿ ಅಧಿಕಾರ ಕೊಡತಕ್ಕಂಥ ಪ್ರಶ್ನೆ ಬಂದಾಗ ಒಬ್ಬರೂ ಕೂಡಾ ಸಪೋರ್ಟ್ ಮಾಡುವುದಿಲ್ಲ. ಇದು ಸ್ಪಷ್ಟವಾಗಿದೆ. ಹಿಂದಿನ ಸರ್ಕಾರದಲ್ಲೂ ಕೂಡಾ ಇದು ಸ್ಪಷ್ಟವಾಗಿದೆ, ಮುಂದೆ ಏನಾಗುತ್ತದೋ ನೋಡೋಣ. ನಾನು ತಮ್ಮಲ್ಲಿ ಕಳಕಳಿಯಿಂದ ಕೇಳಿಕೊಳ್ಳುವುದೇನೆಂದರೆ ಇದರ ಬಗ್ಗೆ ತಕ್ಷಣ ಒಂದು ಆರ್ಡಿನೆನ್ಸ್‌ನ್ನು ತಂದು ಇವತ್ತು ಈ ಸದನದಲ್ಲಿ ಏನು ಬಿಲ್ಲನ್ನು ತಂದಿದ್ದೀರೋ, ಇದೇ ರೀತಿಯಾಗಿ ಜಿಲ್ಲಾ ಪರಿಷತ್ತುಗಳ ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಬಗ್ಗೆ ಮತ್ತು ಮಂಡಲ ಪಂಚಾಯಿತಿಗಳಲ್ಲಿ ಅಧ್ಯಕ್ಷರು, ಉಪಾಧ್ಯಕ್ಷರ ಪೋಸ್ಟ್‌ಗೆ ರಿಸರ್ವೇಷನ್ ಇಡತಕ್ಕಂಥ ಇನ್ ರೊಟೇಷನ್ ತಾವು ಮಾಡಬೇಕು. ತಕ್ಷಣ ಅದನ್ನು ತರಬೇಕು ಎಂದು ಸ್ಪಷ್ಟವಾಗಿ ನಾನು ಇವತ್ತಿನ ದಿವಸ ಹೇಳಂತಿದ್ದೇನೆ. ಇದರ ಜೊತೆಯಲ್ಲಿ ನೀವು ಮತ್ತು ಮಾನ್ಯ ಮುಖ್ಯಮಂತ್ರಿಗಳು ಒಂದು ಸ್ಟೇಟ್‌ಮೆಂಟ್ ಕೂಡಾ ಸ್ಟೇಟ್ ಡೆವಲಪ್ ಮೆಂಟ್ ಕೌನ್ಸಿಲ್‌ನಲ್ಲಿ ತಾವು ಮಾಡಿದ್ದೀರಿ. ಏನೆಂದರೆ, ಸ್ಪೆಷಲ್ ಕಾಂಪೊನೆಂಟ್ ಪ್ಲಾನ್‌ಗೆ ರಿಸರ್ವ್ ಆಗಿರತಕ್ಕಂಥ ಫಂಡ್ಸ್ ಮತ್ತು ಪ್ಲಾನ್‌ನಲ್ಲಿರತಕ್ಕಂಥ ಕೆಲವು ಫಂಡ್ಸ್‌ನ್ನು ಕೂಡಾ ಡೈವರ್ಟ್ ಮಾಡಿ ನಾನ್ ಪ್ಲಾನ್‌ನಲ್ಲಿ ಖರ್ಚು ಮಾಡಿದ್ದಾರೆ, ಮತ್ತು ಸ್ಪೆಷಲ್ ಕಾಂಪೊನೆಂಟ್ ಹಣ ಕೂಡಾ ಬೇರೆ ರೀತಿಯಾಗಿ ಖರ್ಚು ಮಾಡಿದ್ದಾರೆ, ಈ ರೀತಿಯಾಗಿ ಫಂಡನ್ನು ಡೈವರ್ಶಿಫಿಕೇಷನ್ ಮಾಡಿ ಬಡವರಿಗೆ ಸಿಗ ತಕ್ಕಂಥದ್ದನ್ನು ತಪ್ಪಿಸಿ ಅವರಿಗೆ ತೊಂದರೆ ಮಾಡಿದ್ದಾರೆ ಎನ್ನತಕ್ಕಂಥ ಮಾತನ್ನು ಸ್ಪಷ್ಟವಾಗಿ ತಾವು ಸ್ಟೇಟ್ ಡೆವಲಪ್‌ಮೆಂಟ್ ಕೌನ್ಸಿಲ್‌ನಲ್ಲಿ ಹೇಳಿದ್ದೀರಿ. ಆದರೆ ಇವತ್ತಿನ ದಿವಸ ಯಾವ ಕ್ರಮವನ್ನು ಕೂಡಾ ಈ ಸಂದರ್ಭದಲ್ಲಿ ತಾವು ತೆಗೆದುಕೊಂಡಿಲ್ಲ. ಏಕೆಂದರೆ ಸ್ಪೆಷಲ್ ಕಾಂಪೊನೆಂಟ್ ಪ್ಲಾನ್‌ನಲ್ಲಿ ಏನಾದರೂ ಒಂದು ತಿದ್ದುಪಡಿಯನ್ನು ತಂದು ಸಿಂಗಲ್ ಬಿಜಿನ್ಸಿಯನ್ನು ಮಾಡಿ, ಯಾವುದಾದರೂ ಒಂದು ಬಿಜಿನ್ಸಿಯನ್ನು ಮಾಡಿ ಆ ಬಿಜಿನ್ಸಿಯ ಮುಖಾಂತರವೇ ಸ್ಪೆಷಲ್ ಕಾಂಪೊನೆಂಟ್ ಫಂಡ್ಸ್‌ನ್ನು ವಿಲೇವಾರಿ ಮಾಡತಕ್ಕಂಥಮ್ಮ ಹಾಗೂ ಖರ್ಚು ಮಾಡತಕ್ಕಂಥದ್ದನ್ನು ಮಾಡಿದರೆ ಅವರಿಗೆ ಹೋಗಿ ತಲುಪುತ್ತದೆ. ಇಲ್ಲದಿದ್ದರೆ ಮಾರ್ಚ್ ೩೧ಕ್ಕೆ ತರಾತುರಿಯಲ್ಲಿ ಹಣ ಬಂದರೆ ಎಲ್ಲಾ ಜಿಲ್ಲಾ ಪರಿಷತ್ತಿನವರು ಮತ್ತು ಎಲ್ಲಾ ಡಿಪಾರ್ಟ್‌ಮೆಂಟಿನವರು ಯಾವ ರೀತಿಯಲ್ಲಿಯಾದರೂ ಹಣವನ್ನು ಖರ್ಚು ಮಾಡಬೇಕು ಎಂದುಕೊಂಡು ಹಣವನ್ನು ಅವರು ಡ್ರಾ ಮಾಡುತ್ತಾರೆ, ಇಲ್ಲವೇ ಹೋದರೆ ಅದನ್ನು ರಿ-ಅಪ್ರೊಪ್ರಿಯೇಟ್ ಮಾಡಿಕೊಳ್ಳುತ್ತಾರೆ. ಇಲ್ಲದಿದ್ದರೆ ಬೇರೆ ಯಾವುದೋ ಸ್ಕೀಮಿಗೆ ಖರ್ಚು ಮಾಡಿಕೊಳ್ಳುತ್ತಾರೆ. ಇವೊತ್ತು ಬೆಳಿಗ್ಗೆ ಗುಲ್ಬರ್ಗಾ ಜಿಲ್ಲಾ ಪರಿಷತ್‌ನಲ್ಲಿ ಒಂದು ಕೋಟಿ ಇಪ್ಪತ್ತೈದು ಲಕ್ಷ ರೂಪಾಯಿಗಳನ್ನು ಅಗ್ರಿಕಲ್ಚರ್‌ಗೆ ಎಂದು ಇಟ್ಟಂಥ ಹಣವನ್ನು ಬೇರೊಂದು ಸ್ಕೀಮ್‌ಗೆ ಡೈವರ್ಟ್ ಮಾಡಿದರು. ಎಂದು ಮಾನ್ಯ ಸದಸ್ಯರು ಹೇಳಿದರು. ಅಂದರೆ ಅದನ್ನು ರಿ-ಅಪ್ರೊಪ್ರಿಯೇಟ್ ಮಾಡಿ ಕೊಂಡರೆ, ಆಮೇಲೆ ನೀವು ಅದನ್ನು ರೆಗ್ಯುಲರೈಸ್ ಮಾಡಿ ಬಿಡುತ್ತೀರಿ, ಆದ್ದರಿಂದ ಇದನ್ನು ರಿಪ್ಲೈ ಮಾಡಿ. ಈ ಬಡಪರಿಗೆ ಬಂದಂಥ ಹಣ ಏತಕ್ಕೆ ಕೊಟ್ಟಿಲ್ಲ ಎಂದು ನೀವು ಕೇಳುವುದೂ ಇಲ್ಲ ಮತ್ತು ಯಾವ ಅಧಿಕಾರಿಗಳಿಗೆ ಈ ಹಣವನ್ನು ಖರ್ಚು ಮಾಡುವುದಕ್ಕೆ ಜವಾಬ್ದಾರಿ ಇರುತ್ತದೋ ಅವರನ್ನು ಕೂಡಾ ಕೇಳುವುದಿಲ್ಲ ಹಾಗೂ ಅವರಿಗೆ ಶಿಕ್ಷೆಯೂ ಇಲ್ಲ, ಆಮೇಲೆ ಹಣ ಖರ್ಚಾಗಿದೆ, ಒಳ್ಳೆಯದು ಎಂದು ಆಮೇಲೆ ನನ್ನು ಜಿಲ್ಲೆಗೆ ಬಂದಿದ್ದು ಹತ್ತು ಕೋಟಿ ರೂಪಾಯಿ ಖರ್ಚಾಯಿತು, ಅದೇ ಸಂತೋಷ ಎಂಬ ರೀತಿ ಆಗುತ್ತಿದೆ. ಆದರೆ ಇದು ಏತಕ್ಕೆ, ಈ ರೀತಿ ಆಯಿತು ? ಯಾರಿಗಾಗಿ ಬಂದಂಥ ಹಣವನ್ನು ಇವರು ಸರಿಯಾಗಿ ಖರ್ಚು ಮಾಡಿದರೋ ಇಲ್ಲವೋ ಎನ್ನತಕ್ಕಂಥದ್ದರ ಬಗ್ಗೆ ಯಾರೂ ಕೂಡಾ ರೆವ್ಯೂ ಮಾಡುವುದಿಲ್ಲ. ದಯವಿಟ್ಟು ಸ್ಪೆಷಲ್ ಕಾಂಪೊನೆಂಟ್ ಪ್ಲಾನ್‌ನಲ್ಲಿ ಖರ್ಚು ಮಾಡುವುದಕ್ಕೆ ಸ್ಪೆಷಲ್ ಬಿಜಿನ್ಸಿಯನ್ನು ಕ್ರಿಯೇಟ್ ಮಾಡಬೇಕು. ಬೇಕಾದರೆ ಇರತಕ್ಕಂಥ ಕಾನೂನಿನಲ್ಲಿ ತಿದ್ದುಪಡಿಯನ್ನು ತಂದು ಈ ಬಿಜಿನ್ಸಿಯನ್ನು ಕ್ರಿಯೇಟ್ ಮಾಡಿದರೂ ಪರವಾಗಿಲ್ಲ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಯಾವುದೇ ಒಂದು ಸಂಸ್ಥೆಗಳನ್ನು ತಯಾರು ಮಾಡ ತಕ್ಕಂಥದ್ದು ಏತಕ್ಕೆ ? ಇವತ್ತು ಡಿ-ಸೆಂಟ್ರಲೈಜೇಷನ್ ಆಫ್ ಪವರ್‌ನ್ನು ಮಾಡಿದ್ದೇವೆ. ಅಂದರೆ ಮಂಡಲಪಂಚಾಯಿತಿ, ಜಿಲ್ಲಾ ಪರಿಷತ್ತುಗಳಿಗೆ ಅಧಿಕಾರವನ್ನು ಕೊಟ್ಟರೆ ಹಳ್ಳಿಯ ಜನರಿಗೆ, ನಮ್ಮ ನಾಗರೀಕರಿಗೆ ಈ ಸರ್ಕಾರದಿಂದ ಕೊಟ್ಟಂಥ ಸವಲತ್ತುಗಳು ಹೋಗಿ ತಲುಪುತ್ತವೆ ಎನ್ನತಕ್ಕಂಥ ದೃಷ್ಟಿಯಿಂದಲೇ ನಾವು ಮಂಡಲಪಂಚಾಯಿತಿ ಮತ್ತು ಜಿಲ್ಲಾ ಪರಿಷತ್ತುಗಳನ್ನು ಇವತ್ತು ನಾವು ಕ್ರಿಯೇಟ್ ಮಾಡಿದ್ದೇವೆ. ಇದನ್ನು ನಿರ್ಮಾಣ ಮಾಡಿದ್ದೇವೆ ಇದನ್ನು ತಯಾರು ಮಾಡಿದ್ದೇವೆ. ಆದರೆ ಇವತ್ತು ಏನಾಗಿದೆ ಎಂದರೆ, ಯಾರಿಗಾಗಿ, ಯಾವ ಜನಾಂಗಕ್ಕಾಗಿ ಇದು ಅನುಕೂಲವಾಗಬೇಕು, ಹಳ್ಳಿಯಲ್ಲಿರತಕ್ಕಂಥ ಜನರಿಗೆ ಇದರಿಂದ ಲಾಭವಾಗಬೇಕು ಎಂದು ಹೇಳಿ ಕಾನೂನನ್ನು ಮಾಡಿದ್ದೇವೆ. ಅವರಿಗೆ ಇವತ್ತಿನ ದಿವಸ ಚೂರು ಕೂಡ ಲಾಭವಾಗುತ್ತಿಲ್ಲ. ಒಂದೇ ಒಂದು ಉದಾಹರಣೆಯನ್ನು ತಮಗೆ ಹೇಳಬೇಕೆಂದರೆ ಎಂಪಾಡ್ ಎಂದು ಒಂದು ಹಳ್ಳಿ ಇದೆ. ಅಲ್ಲಿ ಒಂದು ಚಾರ್ಜ್ ಇದೆ ಒಬ್ಬ ಸಿಂಡಿಕೇಟ್

ಬ್ಯಾಂಕ್‌ದಿಂದ ೫೫ ಸಾವಿರ ರೂಪಾಯಿಯನ್ನು ಒಂದು ಫ್ಲೋರ್ ಮಿಲ್ಲನ್ನು ಹಾಕುವುದಕ್ಕೆ ಸಾಲವನ್ನು ಪಡೆದುಕೊಂಡ. ಆ ಸಾಲ ಪಡೆಯಲು ಮಂಡಲ ಪಂಚಾಯಿತಿ ಪ್ರಧಾನರ ಮತಿಯಿಂದ ನೊ–ಅಬ್ಜೆಕ್ಷನ್ ಸರ್ಟಿಫಿಕೇಟನ್ನು ತರಬೇಕು.

ಅದು ಇಲ್ಲದೆ ಏನೂ ಮಾಡುವ ಹಾಗೆ ಇಲ್ಲ. ಆದರೆ ಇದನ್ನು ಪಡೆಯಲು ಹಳ್ಳಿಗಳಲ್ಲಿರತಕ್ಕ ಜನರಿಗೆ ಎಷ್ಟು ಕಷ್ಟ ಇದೆ. ಏಂಬುದನ್ನು ಹೇಳುತ್ತಿದ್ದೇನೆ. ಒಂದು ತಿಂಗಳು ಆಯಿತು ಮೂರು ತಿಂಗಳೂ ಆಯಿತು, ಆದರೂ ಸಿಗಲಿಲ್ಲ. ಜಿಲ್ಲಾ ಪರಿಷತ್ ನಮ್ಮದೇ ಇದೆ. ಅನೇಕ ಸಲ ಕಾನೂನು ಎಷ್ಟೇ ಒಳ್ಳೆಯದು ಇದ್ದರೂ ಸಹ ಕಾನೂನನ್ನು ನಡೆಸಿಕೊಂಡು ಹೋಗತಕ್ಕ ಜನ ಸರಿಯಾಗಿ ಇಲ್ಲದಿದ್ದರೆ ಅದು ಎಷ್ಟು ದುರುಪಯೋಗ ಆಗುತ್ತದೆ ಎಂದು ಇದನ್ನು ಹೇಳುತ್ತಿದ್ದೇನೆ. ಜಿಲ್ಲಾ ಪರಿಷತ್‌ನಲ್ಲಿ, ಮಂಡಲ್ ಪಂಚಾಯತ್‌ನಲ್ಲಿ ಅಧಿಕಾರ ವಿಕೇಂದ್ರೀಕರಣ ಮಾಡಬೇಕು ಎಂದು ಕಾನೂನು ಮಾಡಿರುವುದಂ. ಹಳ್ಳಿಗಳಲ್ಲಿರತಕ್ಕ ಜನರ ಕೈಯಲ್ಲಿ ಪವರ್ ಹೋಗಬೇಕು ಎಂದು ಕಾನೂನು ಇದೆ. ಯಾರ ಕೈಯಲ್ಲಿ ಅಧಿಕಾರ ಹೋಗಬೇಕೆಂದರೆ, ಯಾರು ಪ್ರೀತಿ ಇಟ್ಟು, ಕಮಿಟ್‌ಮೆಂಟ್ ಇಟ್ಟು ಕೊಂಡು ಕೆಲಸ ಮಾಡುತ್ತಾರೆ, ಅಂತಹವರ ಕೈಗೆ ಹೋದರೆ ಒಳ್ಳೆಯದಾಗುತ್ತದೆ. ಇಲ್ಲದಿದ್ದರೆ ಎಲ್ಲಾ ಪವರ್ ತನ್ನ ಕೈಯಲ್ಲಿ ಇಟ್ಟುಕೊಂಡು ಪ್ರತಿಯೊಂದು ಹಳ್ಳಿಗಳಲ್ಲಿರತಕ್ಕ ಜನರನ್ನು ಸತಾಯಿಸುವುದು. ಹೆರಾಸ್‌ಮೆಂಟ್ ಮಾಡುವುದು ಮಾಡಿದರೆ ಏನು ಮಾಡುವುದು ? ಇದರಿಂದ ಇವೊತ್ತು ೫೫ ಸಾವಿರ ಸಾಲ ಮಾಡಿದ ವ್ಯಕ್ತಿಯ ಸಾಲ ಇವೊತ್ತು ಎರಡು ಲಕ್ಷ ೫೫ ಸಾವಿರ ರೂಪಾಯಿವರೆಗೆ ಬೆಳೆದಿದೆ. ಆದರೂ ಇಲ್ಲಿಯವರೆಗೆ ಪರ್ಮಿಷನ್ ಬಂದಿಲ್ಲ. ಯಾಕೆ ಪರ್ಮಿಷನ್ ಬಂದಿಲ್ಲವೆಂದರೆ, ಮಂಡಲ್ ಪ್ರಧಾನರೂ ಅದನ್ನು ರಿಜೆಕ್ಟ್ ಮಾಡಿದರು. ನಂತರ ಅದರ ಮೇಲೆ ಅಪೀಲ್ ಎಲ್ಲಿ ಹೋಗಬೇಕು ಎಂದರೆ ಅಪೀಲ್ ಕಮಿಟಿಗೆ ಹೋಗಬೇಕು. ಜಿಲ್ಲಾ ಪರಿಷತ್‌ನ ವೈಸ್ ಪ್ರೆಸಿಡೆಂಟ್ ಅಪೀಲ್ ಕಮಿಟಿಗೆ ಛೇರ್ಮನ್ ಆಗಿದ್ದಾನೆ. ಆ ಛೇರ್‌ಮನ್ ಏನು ಹೇಳುತ್ತಾನೆಂದರೆ, ಈ ಪರ್ಟಿಕ್ಯುಲರ್ ಅಪ್ಲಿಕೇಷನ್ ಇಂತಹ ಪಾರ್ಟಿಯವರದ್ದು ಇದೆ, ಆದ್ದರಿಂದ ಬಿದ್ದಿರಲಿ ಎಂದು ಹೇಳುತ್ತಾರೆ. ಎರಡೂವರೆ ವರ್ಷದಿಂದ ಈ ರೀತಿ ಪೆಂಡಿಂಗ್ ಇದೆ. ಎಲ್ಲಾ ಕಡೆ ಈ ರೀತಿ ಇರಬಹುದೆಂದು ಕಾಣುತ್ತದೆ. ಅನೇಕ ಸಲ ಕಾನೂನು ಒಳ್ಳೆಯದು ಇದ್ದರೂ ಸಹ ಅದರ ಪರಿಣಾಮ ಈ ರೀತಿ ಏತಕ್ಕೆ ಆಗುತ್ತದೆಂದರೆ ಕಮಿಟ್‌ಮೆಂಟ್ ಇಲ್ಲದೆ ಹೋದಾಗ ಈ ರೀತಿ ಆಗುತ್ತದೆ. ಆದಕ್ಕಾಗಿ ಹತೋಟಿಯಲ್ಲಿಡಬೇಕಾಗುತ್ತದೆಂಬ ಮಾತನ್ನು ಮಾನ್ಯ ದೇಶಪಾಂಡೆಯವರಿಗೆ ತಮ್ಮ ಮೂಲಕ ಹೇಳುತ್ತಿದ್ದೇನೆ ಕೆಲವು ಸಲ ಹತೋಟಿ ಇಡಬೇಕಾಗುತ್ತದೆ. ನೀವು ಸಂಪೂರ್ಣ ಅಧಿಕಾರ ಕೊಟ್ಟರೆ ಅವರೂ ಕೂಡ ಈ ರೀತಿ ಮಾಡುತ್ತಿದ್ದಾರೆ. ಹೀಗಾದರೆ ಹಳ್ಳಿಗಳಲ್ಲಿರತಕ್ಕ ಬಡವರು ತಲೆ ಎತ್ತುವುದು ಹೇಗೆ ? ಇದು ಮಾಸ್ ಎಲೆಕ್ಷನ್‌ನಲ್ಲಿ ಆದರೆ ಎಂಎಲ್‌ಎ ಎಲೆಕ್ಷನ್, ಅಥವಾ ಎಂಪಿ ಎಲೆಕ್ಷನ್‌ನಲ್ಲಿ ನಡೆದು ಹೋಗುತ್ತವೆ ಆದರೆ ಜಿಲ್ಲಾ ಪರಿಷತ್ ಮತ್ತು ಮಂಡಲ್ ಪಂಚಾಯತ್ ಚುನಾವಣೆಯಲ್ಲಿ ಊರಾ ಊರಿಗೆ ಮನೆ ಮನೆಗೆ ಜಗಳ ಬರುತ್ತದೆ. ಆಗ ನ್ಯಾಚುರಲ್ ಆಗಿ ಇವು ಪಕ್ಕದ ಮನೆಯವನ ಅಪ್ಲಿಕೇಷನ್ ಇದೆ. ಇಟ್ಟಿರಿ ಎಂದು ಗದ್ದ ಬಂದವನು ಹೇಳುತ್ತಾನೆ ಅಲ್ಲಿ ಬ್ಯಾಡ್ ಪೈಂಡೆಡ್ ಅಥವಾ ಲಾರ್ಜ್ ಹ್ಯಾಂಡೆಡ್ ಬರುವುದಿಲ್ಲ. ಇಲ್ಲಿ ನಾವೂ ನೀವು ಅನೇಕ ಸಲ ಒಂದು ಆಗುತ್ತೇವೆ, ಆದರೆ ಅಲ್ಲಿ ಒಂದಾಗುವುದಿಲ್ಲ. ಅವರು ನಮಗೋಸ್ಕರ ಪಂತ್ಯ ನಿಮಗೋಸ್ಕರ ಫೈಟ್ ಮಾಡಿರುತ್ತಾರೆ ಕೊನೆಗೆ ಸಾಯುವವರೆಗೆ ಹಾಗೆ ಇರುತ್ತಾರೆ. ಇದೇ ಕಾರಣದಿಂದ ಅವನ ಅಪ್ಲಿಕೇಷನ್ ಸಹ ಹಾಗೆಯೇ ಬಿದ್ದಿದೆ. ಇದಕ್ಕೆ ಯಾವ ರೀತಿ ಪರಿಹಾರ ಕೊಡುತ್ತೀರಿ ಇಂತಹವರಿಗೆ ಯಾವ ರೀತಿ ನೀವು ರಕ್ಷಣೆ ಕೊಡುತ್ತೀರಿ, ಇಂತಹವರ ಬಗ್ಗೆ ಏನು ಯೋಚನೆ ಮಾಡಿದ್ದೀರಿ. ಅದನ್ನು ಇವೊತ್ತು ತಾವು ಉತ್ತರ ಕೊಡುವಾಗ ಹೇಳಬೇಕಾಗುತ್ತದೆ. ಇದಕ್ಕೆ ಸಮಗ್ರವಾದ ತಿದ್ದುಪಡಿ ತರಬೇಕಾದ ಅವಶ್ಯಕತೆ ಇತ್ತು ಎಂದು ನಾನು ಹೇಳಿದ್ದೂ. ಇವೊತ್ತು ಒಂದೊ ಅಥವಾ ಎರಡೋ ಮಂಡಲ್ ಪಂಚಾಯತ್ ಎಲೆಕ್ಷನ್‌ಗೋಸ್ಕರ ಈ ತಿದ್ದುಪಡಿ ತರತಕ್ಕಂತಹ ಅವಶ್ಯಕತೆಯೇ ಇರಲಿಲ್ಲ. ಯಾಕೆಂದರೆ ಎಲ್ಲಿಯೂ ಕೆಲಸ ನಿಂತಿಲ್ಲ. ೨೫೦೦ ಮಂಡಲ್ ಪಂಚಾಯತ್‌ಗಳ ಪೈಕಿ ಕೆಲಸ ಏನಾದರು ನಿಂತು ಹೋಗಿದೆಯೇ ? ಅಥವಾ ೧೯ ಜಿಲ್ಲಾ ಪರಿಷತ್‌ಗಳ ಪೈಕಿ ಎಲ್ಲಿಯಾದರು ಕೆಲಸ ನಿಂತಿದೆಯೇ ಎಂದರೆ ಇಲ್ಲ. ಮುನಿಸಿಪಾಲಿಟಿಗಳಲ್ಲಿ ಮಾತ್ರ ನಿಂತಿದೆ. ಇದಕ್ಕೆ ಅವಕಾಶ ಇತ್ತು. ಏಕೆಂದರೆ ಎಲ್ಲಾ ಕಡೆ ಅಡ್ಮಿನಿಸ್ಟ್ರೇಟರ್ಸ್ ಅನ್ನು ಹಾಕಿದ್ದೇವೆ.

ಶ್ರೀ ಹೆ. ಬೈರೇಗೌಡ.—ಬೆಂಗಳೂರು ಸಿಟಿಯಲ್ಲಿ ಮಾತ್ರ ಅಲ್ಲ, ಮಂಡಲ್ ಪಂಚಾಯತ್ ಎಲಕ್ಷನ್ ಆಗಲಿ ಜಿಲ್ಲಾ ಪರಿಷತ್ ಎಲೆಕ್ಷನ್ ಆಗಲಿ, ಇಲ್ಲಿಯವರೆಗೆ ಆಗಿಲ್ಲ ಅರ್ಬನ್ ಡಿಸ್ಟ್ರಿಕ್ಟ್‌ನಲ್ಲಿ ಆಗಿಲ್ಲ.

ಶ್ರೀ ಪಂಡಿತಾರ್ಜುನ ಎಂ. ಖರ್ಗೆ.– ಅನೇಕ ಕಡೆ ಇಂತಹ ಪ್ರಸಂಗಗಳು ಬರುತ್ತವೆ. ಅದನ್ನು ಪರಿಹಾರ ಮಾಡುವುದಕ್ಕೆ. ಇಂತಹ ಬಡವರಿಗೆ ಸಹಾಯ ಮಾಡುವುದಕ್ಕೆ ಏನು ಮಾಡುತ್ತಿದ್ದೀರಿ. ಇಂತಹ ಸಮಯದಲ್ಲಿ ಸರ್ಕಾರದವರು ಇಂಟರ್‌ಫಿಯರ್ ಆಗದೇ ಹೋದರೆ ಇನ್ನು ಯಾರು ಆಗಬೇಕು.

ಒಬ್ಬ ಬಡವನಿಗೆ ಸಾಲವು ಸಿಗದೇ ಹೋದರೆ, ಅದಕ್ಕೆ ಕಾನೂನು ಇವೆ. ಅವರಂತೆ ಅಪೀಲ್ ಡಿಸ್ಪೋಸ್ ಆಲ್ ಮಾಡಬೇಕು, ಆದರೆ ಮಾಡುವುದಿಲ್ಲ. ಇಂತಹ ಕಾನೂನು ಇದ್ದರೂ ಸಹ ಅನೇಕ ಜಿಲ್ಲಾ ಪರಿಷತ್‌ಗಳು ಮಂಡಲ್ ಪಂಚಾಯತ್‌ಗಳು ಕಾನೂನು ವಿರುದ್ಧ ನಡೆದುಕೊಂಡರೆ ಯಾರು ಇಂಟರ್‌ಫಿಯರ್ ಮಾಡಬೇಕು. ಸುಪ್ರೀಂ ಬಾಡಿ ಇದು ಲೆಜಿಸ್ಲೇಚರ್ ಆದ್ದರಿಂದ ನಾವು ಏನಾದರೂ ಒಂದು ಪ್ರಹಾರ ಕೊಡಬೇಕಲ್ಲ. ಆದ್ದರಿಂದ ಇದನ್ನು ಸರಿಪಡಿಸುವುದಕ್ಕೆ ಸರ್ಕಾರ ಏನಾದರೂ ಪ್ರಯತ್ನ ಮಾಡಬೇಕು. ಇದನ್ನು ನಾವು ಸರಿ ಪಡಿಸಬೇಕು. ಇದರಲ್ಲಿ ಅನೇಕ ನ್ಯೂನತೆಗಳು ಇವೆ. ಅದನ್ನೆಲ್ಲಾ ಸಮಗ್ರವಾದ ತಿದ್ದುಪಡಿ ತಂದಾಗ ಹೇಳುತ್ತೇನೆ, ಅಥವಾ ಅದಕ್ಕಿಂತ ಮುಂಚೆ ಈ ಸದನದ ಸದಸ್ಯರನ್ನು ಕರೆಸಿ ಕೇಳಿದರೆ ಖಂಡಿತವಾಗಿ ನಾವು ಸಲಹೆಗಳನ್ನು ಕೊಡುತ್ತೇವೆ ಎಂದು ಹೇಳಿ ಈಗ ತಂದಂತಹ ತಿದ್ದುಪಡಿಯನ್ನು ಅನುಮೋದಿಸುತ್ತೇವೆ, ಆದರೆ ಸಮಗ್ರವಾದ ತಿದ್ದುಪಡಿ ತರಬೇಕಾಗಿತ್ತು ಎನ್ನುವ ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ).—ಮಾನ್ಯ ಉಪಾಧ್ಯಕ್ಷಣಿಯವರೆ, ಇವತ್ತು ಈ ವಿಧೇಯಕವನ್ನು ಸದನದ ಮುಂದೆ ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ತಂದಿದ್ದಾರೆ, ಇದನ್ನು ನಾನು ತೀರ ಸೊಂದವಂಸ್ಪಿನಿಂದ ವಿರೋಧಮಾಡಬೇಕಾಗಿದೆ. ಮಾನ್ಯ ಬಸವಲಿಂಗಪ್ಪನವರು ಗ್ರಾಮೀಣಾಭಿವೃದ್ಧಿ ಸಚಿವರಾದ ಮೇಲೆ ಬಹಳ ದೊಡ್ಡ ಕ್ರಾಂತಿಕಾರಕ ಬದಲಾವಣೆಗಳನ್ನು ಮಾಡಿ ಮತ್ತಷ್ಟು ಅಧಿಕಾರವನ್ನು ಇವರು ವಿಕೇಂದ್ರೀಕರಣಮಾಡಿ ಅವರಿಗೆ ಅನುಕೂಲವಾಗತಕ್ಕ ಹಾಗೆ ಕೆಲಸ ಮಾಡುತ್ತಾರೆ ಎಂದು ನಾವಾದರೂ ಅಂದುಕೊಂಡಿದ್ದೆವು. ಆದರೆ ಇವತ್ತು ಮಾನ್ಯ ಬಸವಲಿಂಗಪ್ಪನವರು ಮಂಡನೆ ಮಾಡಿರತಕ್ಕಂಥ ಈ ವಿಧೇಯಕ ಏನಿದೆ ಇದು ಸಂವಿಧಾನಬಾಹಿರವಾಗಿರತಕ್ಕಂಥಾದ್ದು ಚುನಾವಣಾ ಪ್ರಕ್ರಿಯೆಗಳಿಗೆ ಒಂದು ಅಪಚಾರ ಎಸಗಿರತಕ್ಕಂಥ ಒಂದು ವಿಧೇಯಕ ಎಂದು ನಾನು ಹೇಳಬೇಕಾಗಿದೆ. ಏಕೆಂದರೆ ಈ ಒಂದು ಅಧಿಕಾರವನ್ನು ಇವರು ಕೈಗೆ ತೆಗೆದುಕೊಂಡಮೇಲೆ ಯಾವ ಚುನಾವಣೆಗಳನ್ನು ಬೇಕಾದರೂ ಇವರಿಗೆ ಇಷ್ಟ ಬಂದಾಗ ಆಡಳಿತ ಪಕ್ಷದವರು ಇದನ್ನು ಮುಂದಕ್ಕೆ ಹಾಕಿಕೊಳ್ಳಬಹುದು. ಈಗ ದಯವಿಟ್ಟು ಯೋಚನೆಮಾಡಿ. ತಮ್ಮ ಪಕ್ಷದಲ್ಲೇ ಇದಕ್ಕೆ ಒಮ್ಮತ ಇದೆಯೆಂದು ನಾನಾದರೂ ತಿಳಿದುಕೊಂಡಿಲ್ಲ. ಬಹುಶಃ ಕಳೆದ ಆರು ವರ್ಷಗಳ ಇತಿಹಾಸದಲ್ಲಿ ಕಾರ್ಪೊರೇಷನ್ ಚುನಾವಣೆಗಳನ್ನು, ಮುನಿಸಿಪಾಲಿಟಿ ಚುನಾವಣೆಗಳನ್ನು ಈ ಪಂಚಾಯಿತಿ ಚುನಾವಣೆಗಳನ್ನು ಪ್ರಕ್ರಿಯೆ ಪ್ರಾರಂಭವಾದ ಮೇಲೆ ನಮ್ಮ ಪಕ್ಷದ ಅನೇಕ ಅಭ್ಯರ್ಥಿಗಳು, ನಿಮ್ಮ ಪಕ್ಷದ ಅನೇಕ ಅಭ್ಯರ್ಥಿಗಳು ಸಾವಿರಾರು ರೂಪಾಯಿಗಳ ಹಣವನ್ನು ಪ್ರಚಾರಕ್ಕೋಸ್ಕರ ಹಾಳುಮಾಡಿಕೊಂಡಿದ್ದಾರೆ. ಮಾನ್ಯ ಮೊಯ್ಲಿಯವರು ನಾವೆಲ್ಲಾ ಆಷ್ಟಪ್ರತಿಶತಿಗಳು ಎಂದು ನಿನ್ನೆ ಹೇಳಿದರು. ಅದು ನಿಮ್ಮ ಪಕ್ಷಕ್ಕೆ ಬಹಳ ಅನ್ವಯವಾಗುತ್ತದೆ ಎಂದು ನಾನಾದರೂ ಅಂದುಕೊಂಡಿದ್ದೇನೆ. ಇವತ್ತು ಇಷ್ಟೊಂದು ಜನ ಅಭ್ಯರ್ಥಿಗಳು ಹಣವನ್ನು ಕಳೆದುಕೊಂಡು ಏನಪ್ಪ, ಈ ಚುನಾವಣೆ ನಮಗೆ ಒಂದು ಶಾಪವಾಗಿ ಬಂದಿದೆಯೆಲ್ಲ ಎನ್ನತಕ್ಕಂಥ ಒಂದು ಭಾವನೆ ಅವರಲ್ಲಿ ಬಂದಿದೆ. ೧೦ ದಿನ ಚುನಾವಣೆ ಪ್ರಚಾರ ಆದಮೇಲೆ ಒಂದು ಕಡೆ ಸರ್ಕಾರಿ ನೌಕರರು ಮುಷ್ಕರ ಮಾಡುತ್ತಾ ಇದ್ದಾರೆ. ಅವರ ಈ ಮುಷ್ಕರವನ್ನು ತಾವು ಯಾವ ರೀತಿ ಹ್ಯಾಂಡಲ್ ಮಾಡಿದಿರಿ ಅದೇ ಸರಿಯಿಲ್ಲ. ಅದೇ ಒಂದು ನೆಪ ಇಟ್ಟುಕೊಂಡು ಈ ಚುನಾವಣೆಗಳನ್ನು ಮುಂದೆ ಹಾಕಿದಿರಿ, ಚುನಾವಣೆಗಳನ್ನು ಮುಂದೆ ಹಾಕಲಿಕ್ಕೆ ನಿಮಗೆ ಅಧಿಕಾರಾನೇ ಇರಲಿಲ್ಲ. ಆರ್ಡಿನೆನ್ಸ್ ಹೊರಡಿಸಿದಿರಿ. ಈಗ ಮಾಡಿರತಕ್ಕ ತಪ್ಪನ್ನು ಮುಚ್ಚಿಕೊಳ್ಳುವುದಕ್ಕೆ ಮತ್ತೊಂದು ತಪ್ಪನ್ನೂ ಸಹಿತ ಶಾಶ್ವತವಾಗಿ ಮಾಡಲಿಕ್ಕೆ ಹೊರಟ್ಟಿದ್ದೀರಿ ನಿಮಗೆ ಗೊತ್ತಿದೆ, ನಾನು ವಯಸ್ಸಿನಲ್ಲಿ ನಿಮಗಿಂತ ಚಿಕ್ಕವನು. ನೀವು ಈ ಕಡೆಯೂ ಕುಳಿತಿದ್ದೀರಿ, ಆ ಕಡೆಯಲ್ಲೂ ಕುಳಿತಿದ್ದೀರಿ. ಅಲ್ಲಿಯೇ ನೀವು ಶಾಶ್ವತವಾಗಿ ಕುಳಿತುಕೊಳ್ಳುವುದಕ್ಕೆ ಆಗುವುದಿಲ್ಲ. ೫ ವರ್ಷ ಕುಳಿತುಕೊಳ್ಳಿ, ಈಗ ಜನರು ಅಧಿಕಾರ ಕೊಟ್ಟಿದ್ದಾರೆ, ೫ ವರ್ಷ ಕುಳಿತಿರುತ್ತೀರಿ. ಆದರೆ ತಾವು ಹೋದಮೇಲೆ ಅಲ್ಲಿಗೆ ಬರುವ ಮತ್ತೊಬ್ಬರಿಗೆ ತಾವು ಬ್ರಹ್ಮಾಸ್ತ್ರವನ್ನು ಅವರ ಕೈಗೆ ಕೊಡುತ್ತಾ ಇದ್ದೀರಿ. ಇದರ ದುರುಪಯೋಗವಾಗುವುದರಲ್ಲಿ ಯಾವುದೇ ರೀತಿಯ ಸಂಶಯ ಇಲ್ಲ. ಆಡಳಿತ ಪಕ್ಷ ಯಾವುದೇ ಆಗಿರಲಿ. ಅಲ್ಲಿ ಕುಳಿತುಕೊಂಡಿರತಕ್ಕೆ ಮಾನ್ಯ ಬಂಗಾರಪ್ಪನವರು, ಮಾನ್ಯ ಕಾರ್ಯಾಡು ಶಿವಪ್ಪನವರು ನಿಂವೆಲ್ಲಾ ವಿರೋಧಪಕ್ಷದಲ್ಲಿ ಕುಳಿತುಕೊಂಡು ಪ್ರಜಾಪ್ರಭುತ್ವದ ಬಗ್ಗೆ ಬಹಳ ಮಾತನಾಡಿದ್ದೀರಿ. ಚುನಾವಣೆಗಳನ್ನು ಮಾಡಬೇಕು ಎಂದು ಒತ್ತಾಯ ತರುತ್ತಾ ಇದ್ದಿರಿ. ಆದರೆ ಈಗ ಚುನಾವಣೆಗಳನ್ನು ಮುಂದೂಡುವ ಬಗ್ಗೆ ಏಕೆ ಸುಮ್ಮನೆ ಇದ್ದೀರಿ ಎಂದು ನನಗಂತೂ ಅರ್ಥವಾಗುತ್ತಾ ಇಲ್ಲ. ನೀವು ಏನು ಬ್ರಹ್ಮಾಸ್ತ್ರವನ್ನು ನಿಮ್ಮ ಕೈ ತೆಗೆದುಕೊಳ್ಳುತ್ತಾ ಇದ್ದೀರಿ. ಇದರ ಬಗ್ಗೆ ನಾನು ಮಾತನಾಡುತ್ತಾ ಇರತಕ್ಕಂಥಾದ್ದು. ಪಂಚಾಯಿತಿ ರಾಜ್ ಮಸೂದೆಯ ವಿಧೇಯಕದಲ್ಲಿ ತಿದ್ದುಪಡಿ ಮಾಡತಕ್ಕಂಥಾದ್ದನ್ನು ಮಾಡಬೇಕೆಂದು ಮಾನ್ಯ ಖಾರ್ಗೆಯವರು ಹೇಳಿದರು. ನಾನು ಬಡ್ಜೆಟ್ ಮೇಲೆ ಮಾತನಾಡುವಂಥ ಸಂದರ್ಭದಲ್ಲಿ ಹೇಳಿದೆ. ಅವರು ಮಾಡಿರತಕ್ಕ ಮಾದವನ್ನು ನಾನು ಪುರಸ್ಕಾರ ಮಾಡಿದ್ದೇನೆ. ಹಿಂದುಳಿದ ವರ್ಗದವರಿಗೆ,

ಅಲ್ಪಸಂಖ್ಯಾತ ಜನಗಳಿಗೆ ಮತ್ತು ಹರಿಜನ ಗಿರಿಜನ ವರ್ಗಕ್ಕೆ ಸೇರಿರತಕ್ಕ ಜನಗಳಿಗೆ ಜಿಲ್ಲಾ ಪರಿಷತ್ತಿನ ಅಧ್ಯಕ್ಷಸ್ಥಾನ ಬೈ ರೊಟೇಷನ್ ಬೇಸಿಸ್, ಪ್ರಧಾನ ಸ್ಥಾನ ಬೈ ರೋಟೇಷನ್ ಬೇಸಿಸ್, ಉಪ ಪ್ರಧಾನ ಸ್ಥಾನ ಬೈ ರೋಟೇಷನ್ ಬೇಸಿಸ್ ಕೊಡುವಂಥಾದ್ದರ ಬಗ್ಗೆ ನೀವು ತಿದ್ದುಪಡಿ ತೆಗೆದುಕೊಂಡು ಬನ್ನಿ ನಾವೆಲ್ಲಾ ಅದನ್ನು ಸ್ವಾಗತ ಮಾಡುತ್ತೇವೆ. ನೀವು ಮಾಡತಕ್ಕದ್ದು ಸರಿ ಎಂದು ಹೇಳುತ್ತೇನೆ. ನೀವು ಅದನ್ನು ಮಾಡದೆ.....

ಶ್ರೀ ಎಸ್. ಬಂಗಾರಪ್ಪ —ಕ್ಷಮಿಸಬೇಕು, ನೀವು ಪ್ರಾರಂಭಮಾಡಿದಿರಿ, ಮಧ್ಯೆ ನಾನು ಬರುವುದಕ್ಕೆ ಆಸೆ ಇಲ್ಲ. ನಾವು ಆ ಕಡೆ ಕುಳಿತುಕೊಂಡಾಗ ತಮ್ಮ ಪಕ್ಷದ ಸರ್ಕಾರ ಇಲ್ಲಿದ್ದಾಗ ನಾವು ಕೆಲವು ಸಲಹೆಗಳನ್ನು ಕೊಟ್ಟೆವು, ಈ ರೊಟೇಷನ್ ಆಯಿತಲ್ಲ, ಕೆಲವು ಜಿಲ್ಲಾ ಪರಿಷತ್ತಿನ ಅಧ್ಯಕ್ಷರುಗಳು ಇದ್ದಾರಲ್ಲ ಅದು ಷೆಡ್ಯೂಲ್ ಕ್ಯಾಸ್ಟ್‌ಗೇ ಮೀಸಲು ಆಗಿರಬೇಕು. ಈಗ ನನ್ನ ಸೊರಬ ತಾಲ್ಲೂಕಿನಲ್ಲಿ ೧೯–೨೦ ಮಂಡಲಗಳು ಇವೆ. ಅದರಲ್ಲಿ ಎಷ್ಟು ಮಂಡಲಗಳು ಎಸ್.ಸಿ.ಎಸ್.ಟಿ. ಅಥವಾ ಬ್ಯಾಕ್ ವರ್ಡ್ ಕಮ್ಯೂನಿಟಿಗೆ ಮೀಸಲಾಗಿದೆ, ಎಂದು ಮೀಸಲಾಗಿಡಬೇಕಾಗಿರುತ್ತದೆ. ಈಗ ನಾವು ಪಾರ್ಲಿಮೆಂಟ್ ಚುನಾವಣಾ ಕ್ಷೇತ್ರಗಳಲ್ಲಿ ಮೀಸಲು ಇಟ್ಟಿಲ್ಲವೇ, ಎಂ.ಎಲ್.ಎ. ಸೀಟುಗಳಲ್ಲಿ ಮೀಸಲು ಇಟ್ಟಿಲ್ಲವೇ, ಅವುಗಳಿಗೆ ಇಟ್ಟಿಹಾಗೆ ಇದಕ್ಕೂ ಇಡದೇ ಇದ್ದರೆ ಬಹಳ ಕಷ್ಟವಾಗುತ್ತದೆ. ಕಾನ್‌ಸ್ಟಿಟ್ಯೂಷನ್ ಅಮೆಂಡ್‌ಮೆಂಟ್ ಬಿಲ್ ಬಂದಾಗ ನಾನು ಹೇಳಿದೆ. ಈಗ ರಾಜ್ಯಸಭೆಯಲ್ಲಿ ಎಲ್ಲಿದೆ, ಇಪತ್ತು ನಮ್ಮ ಪಕ್ಷದ ಸರ್ಕಾರ ಕೇಂದ್ರದಲ್ಲಿ ಇರಬಹುದು, ನಮ್ಮ ಪಕ್ಷದ ಸರ್ಕಾರ ಈಗ ಇಲ್ಲಿದೆ. ಈಗ ರಾಜ್ಯಸಭೆಯಲ್ಲಿ ಮೀಸಲಾತಿ ಸ್ಥಾನಗಳು ಎಲ್ಲಿದೆ ಎಂದು ನಾನು ಕೇಳುತ್ತಾ ಇದ್ದೇನೆ. ಈಗ ಕೌನ್ಸಿಲ್‌ನಲ್ಲಿ ಅಂಡರ್ ದಿ ಕಾನ್‌ಸ್ಟಿಟ್ಯೂಷನ್ ಮೀಸಲಾತಿ ಸ್ಥಾನಗಳು ಎಲ್ಲಿದೆ ಎಂದು ನಾನು ಕೇಳುತ್ತಾ ಇದ್ದೇನೆ. ನಾವು ವಿಚಾರ ಮಾಡಬೇಕಾಗಿದೆ, There is no provision under the Constitution. That is why no proper or due representation has been given to the oppressed You have to consider giving representation to the unrepresented community which are considered to be the class that are oppressed. ನೀವು ಮಾಡಬೇಕು ಎಂದು ಇದ್ದರೆ ಮೊದಲು ರಿಜರ್ವೇಷನ್ ಇದೆಯೆಲ್ಲಾ, ಅದನ್ನು ಸ್ಪೀಚ್ ಮಾಡಬೇಕು, ರೊಟೇಷನ್ ಮಾಡುವುದಲ್ಲ, ನೀವು ೫-೫ ವರ್ಷ ಇಡಿ, ಬರೀ ಸದಸ್ಯರನ್ನು ಮಾಡಿ ಬಿಡುವುದು,

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ರೊಟೇಷನ್ ಅಂದರೆ ೫ ವರ್ಷದಲ್ಲಿ ಒಂದೊಂದು ಜಿಲ್ಲೆಗೆ ಒಂದೊಂದು ವರ್ಷ ಎಂದು ಅರ್ಥ.

ಶ್ರೀ ಎಸ್. ಬಂಗಾರಪ್ಪ.—ಅದು ಒಳ್ಳೆಯ ಸಜೆಷನ್, ಆ ರೀತಿ ಮಾಡಿ ನಾನು ಅವರ ಅಗ್ರ್ಯುಮೆಂಟನ್ನು ತಪ್ಪೆಂದು ತಿಳಿದುಕೊಂಡಿದ್ದೆ. ನಿಮ್ಮ ಸರ್ಕಾರ ಇದ್ದಾಗ ಪ್ರಾತಿನಿಧ್ಯ ಸರಿಯಾಗಿ ಬಂದಿಲ್ಲ. ಕೆಲವು ಮಂಡಲಗಳನ್ನು ಷೆಡ್ಯೂಲ್ಡ್ ಕ್ಯಾಸ್ಟ್‌ನವರಿಗೇ ಮೀಸಲಿಡಬೇಕು. ಜಿಲ್ಲಾಪರಿಷತ್ತಿನ ಅಧ್ಯಕ್ಷರನ್ನು ಈ ಪಗಡೆಗಳಿಂದ ಆರಿಸಿಲ್ಲ. ಅದಕ್ಕೆ ಅವಕಾಶ ಮಾಡಿಕೊಟ್ಟಿಲ್ಲ, ಈಗ ಏನಿದ್ದರೂ ಬರೀ ಜಿಲ್ಲಾ ಪರಿಷತ್ತಿನ ಮೆಂಬರ್‌ಗಳನ್ನು ಮಾಡಿದ್ದೀರಿ. ಇದಕ್ಕೆ ಅವಕಾಶವಿರಬೇಕು. ಅಧಿಕಾರದಲ್ಲಿ ಯಾರೇ ಇರಲಿ, ಈ ಜನಾಂಗದವರಿಗೆ ಸೂಕ್ತ ಪ್ರಾತಿನಿಧ್ಯ ಇರಬೇಕು.

ಶ್ರೀ ಪಿ.ಜಿ.ಆರ್. ಸಿಂಧ್ಯ.—ಇದರ ಬಗ್ಗೆ ತಿದ್ದುಪಡಿಯನ್ನು ತೆಗೆದುಕೊಂಡು ಬನ್ನಿ ನಾವು ಸ್ವಾಗತ ಮಾಡುತ್ತೇವೆ. ನಿಮ್ಮ ವಾದವನ್ನು ಮತ್ತು ಮಾನ್ಯ ಖರ್ಗೆ ಅವರ ವಾದವನ್ನು ನಾನು ಒಪ್ಪುತ್ತೇನೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ನಾನು ಅಲ್ಲಿದ್ದಾಗ ಇದರ ಬಗ್ಗೆ ತಿದ್ದುಪಡಿಯನ್ನು ತೆಗೆದುಕೊಂಡು ಬಂದಿದ್ದೆ. ನೀವು ಅದನ್ನು ಎರಡು ಓಟಿನಿಂದ ಕೆಡವಿದಿರಿ, ಬಿ.ಜೆ.ಪಿ.ಯವರು ಮತ್ತು ಸಿ.ಪಿ.ಐ. ನವರು ಸಪೋರ್ಟ್ ಮಾಡಿದರು. ಆ ದಿನ ನೀವು ಮತ್ತು ಜಾಲಪ್ಪನವರು ಓಟು ಹಾಕಿದ್ದರೆ ಅದು ಪಾಸ್ ಆಗುತ್ತಿತ್ತು.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಆದಿನ ನಾನು ಇರಲಿಲ್ಲ. ಯಾರು ಬಡವರಿದ್ದಾರೆ, ಯಾರು ಸಪ್ರೆಸ್ಡ್ ಕ್ಲಾಸ್, ಡಿಪ್ರೆಸ್ಡ್ ಕ್ಲಾಸ್ ಜನರು ಇದ್ದಾರೆ, ಅವರಿಗೆ ಅನುಕೂಲವಾಗತಕ್ಕ, ಹಾಗೂ ಸಹಾಯವಾಗತಕ್ಕ ಒಂದು ವಿಧೇಯಕವನ್ನು ತರುತ್ತೀರೆಂದು ನಾನೂ ನಿರೀಕ್ಷೆ ಮಾಡಿದ್ದೆ, ಆದರೆ ನನಗೆ ಬಹಳ ನಿರಾಸೆಯಾಗಿದೆ. ಈಗ ಮಾಡಿರುವ ತಪ್ಪನ್ನು ಮುಚ್ಚಿಕೊಳ್ಳಲು ಈ ಬ್ರಹ್ಮಾಸ್ತ್ರವನ್ನು ತಮ್ಮ ಕೈಗೆ ತೆಗೆದುಕೊಳ್ಳುತ್ತಿದ್ದೀರಿ.

ಶ್ರೀ ಬಿ. ಬಸವಲಿಂಗಪ್ಪ.—ಇದು ಸಣ್ಣದು, ದೊಡ ದನ್ನು ನಿಮ್ಮನ್ನು ಕೇಳಿ ತರುತ್ತೇವೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಶ್ರೀ ಬಸವಲಿಂಗಪ್ಪನವರು ಈ ಬಗ್ಗೆ ವಿಧೇಯಕವನ್ನು ತರಬೇಕೆಂಬ ಮನಸ್ಸಿದೆ. ಆದರೆ ಅಲ್ಲಿರುವವರು ಬೆಂಬಲ ಕೊಡುತ್ತಿಲ್ಲ. ನಾವು ಮಾತ್ರ ಬೆಂಬಲ ಕೊಡುತ್ತೇವೆ.

ಶ್ರೀ ಎಸ್. ಬಂಗಾರಪ್ಪ.—ತರಬೇಕೆಂಬ ಬಗ್ಗೆ ಆಸೆ ಇದೆ. ತಂದೇ ತರುತ್ತಾರೆ. ಮಾನ್ಯ ಬಸವಲಿಂಗಪ್ಪನವರ ಆಸೆಯನ್ನು ನಾವೆಲ್ಲರೂ ಸಹ ಇಟ್ಟು ಕೊಂಡಿದ್ದೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯ.—೧೫೦ ಶಾಸಕರ ಬೆಂಬಲ ಇರತಕ್ಕ ಸರ್ಕಾರ ಇದು. ಆದರಿಂದ ನೀವು ಯೋಜನೆ ಮಾಡಿನೋಡಿ. ಬಹಳ ಹಿರಿಯ ಸದಸ್ಯರು ಈ ಸದನದಲ್ಲಿ ಇದ್ದಾರೆ. ಶ್ರೀಮತಿ ನಾಗರತ್ನಮ್ಮನವರು, ಹಾಗೂ ಶ್ರೀ ಕೆ.ಹೆಚ್. ಪಾಟೀಲರ ಎದುರುಗಡೆ ನಿಂತುಕೊಂಡು ಮಾತನಾಡ ಬೇಕೆಂದರೆ ನನಗೆ ಬಹಳ ಭಯವಾಗುತ್ತಿದೆ. ಅವರು ಮಾತನಾಡುತ್ತಿಲ್ಲ ಏತಕ್ಕೋ ಗೊತ್ತಿಲ್ಲ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.— ಅತಿ ವಿನಯಂ ಧೂರ್ತ ಲಕ್ಷಣಂ

(ನಗು)

SRI P. G. R. SINDHYA — I am not conspiring anything. I am incompetent to make any conspiracies.

ಶ್ರೀ ಬಿ. ಎಸ್. ಯಡಿಯೂರಪ್ಪ.— ಒಂದು ಕೆಂಡ ಎಸೆದಿದ್ದಾರೆ, ಹಚ್ಚಿಕೊಳ್ಳುತ್ತದೆಯೋ ಏನೋ ನೋಡೋಣ ಎಂದು.

ಶ್ರೀ ಪಿ. ಜಿ.ಆರ್. ಸಿಂಧ್ಯ.— ನಿಮಗೆ ೧೫೦ ಜನ ಶಾಸಕರ ಬೆಂಬಲ ಇದೆ. ಆದರೂ ಫೆಬ್ರುವರಿ ೨೫ ರಂದು ಎಲೆಕ್ಷನ್ ಮಾಡುತ್ತೇವೆಂದು ಹೇಳಿ ಮಂದಕ್ಕೆ ಹಾಕಿದ್ದು ಏತಕ್ಕೆ ? ಇದರಿಂದ ಜನರ ನಗೆಪಾಟಲಿಗೆ ನೀವು ಈಡಾಗಿದ್ದೀರಿ. ಅಭ್ಯರ್ಥಿಗಳು ಕಾಸು ಖರ್ಚು ಮಾಡಿಕೊಂಡು ಬಹಳ ಕಷ್ಟದಲ್ಲಿದ್ದಾರೆ. ಅವರೆಲ್ಲಾ ಅಳುತ್ತಿದ್ದಾರೆ. ಇಂತಹ ಒಂದು ಹಾಸ್ಯಾಸ್ಪದವಾದಂತಹ ಕೆಲಸ ಸರ್ಕಾರದಿಂದ ಆಗಿದೆ. ಇದು ಯಾರಿಗೂ ಆದರಲ್ಲೂ ಆಡಳಿತ ಪಕ್ಷದವರಿಗೆ ಖಂಡಿತವಾಗಿ ಕ್ಷೋಭೆ ತರತಕ್ಕದ್ದು ಅಲ್ಲ. ಇನ್ನು ಮುಂದೆಯಾದರೂ ತಾವು ಈ ವಿಧೇಯಕವನ್ನು ಪಾಪಸ್ಸು ತೆಗೆದುಕೊಂಡು ಈ ಬ್ರಹ್ಮಾಸ್ತ್ರವನ್ನು ತೆಗೆದುಕೊಳ್ಳುತಕ್ಕ ಕೆಲಸವನ್ನು ತಾವು ಮಾಡಬೇಡಿಯೆಂದು ಮಾನ್ಯ ಉಪಾಧ್ಯಕ್ಷರ ಮೂಲಕ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

† ಶ್ರೀ ಹೆಚ್. ಎಸ್. ಕೌಜಲಗಿ (ಬೈಲಹೊಂಗಲ).—ಮಾನ್ಯ ಅಧ್ಯಕ್ಷರೆ, ಗ್ರಾಮಾಭಿವೃದ್ಧಿ ಸಚಿವರು ಏನು Section 272 Aಗೆ ತಿದ್ದುಪಡಿಯನ್ನು ತಂದಿದ್ದಾರೆ. ಇದನ್ನು ವಿರೋಧಿಸಿ ನಾಲ್ಕು ಮಾತನಾಡಲು ಬಯಸುತ್ತೇನೆ. ಎಲೆಕ್ಷನ್ ಕಮಿಷನರ್‌ರವರು ಮಾಡತಕ್ಕ ಕೆಲಸವನ್ನು ಸರ್ಕಾರದವರು ತಮ್ಮ ಹತೋಟಿಯಲ್ಲಿ ತೆಗೆದುಕೊಳ್ಳುವ ಉದ್ದೇಶದಿಂದ ಈ ಬಿಲ್ಲನ್ನು ತಂದಿದ್ದಾರೆ. You have said:

> "...or Zilla Parishad shall be subject to the control and supervision of the Government"

The Election Commission should have this control and supervision. ಸರ್ಕಾರದ ಕೈಯಲ್ಲಿ ಈ ಅಧಿಕಾರ ಇದ್ದರೆ ಎಲೆಕ್ಷನ್ ಮೇಲೆ ಬಹಳ ಪರಿಣಾಮವಾಗುತ್ತದೆ. ಆದ್ದರಿಂದ ಈ ಬಿಲ್ಲನ್ನು ವಿತ್‌ಡ್ರಾ ಮಾಡಿಕೊಳ್ಳಬೇಕೆಂದು ಕೇಳಿಕೊಂಡು ನನಗೆ ಎರಡು ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ (ಪಂಚಾಯತ್ ರಾಜ್ ಸಚಿವರು).— ಮಾನ್ಯ ಅಧ್ಯಕ್ಷರೆ, ನಾನು ಇದನ್ನು ಸಣ್ಣ ತಿದ್ದುಪಡಿ ಎಂದು ತಿಳಿದುಕೊಂಡಿದ್ದೆ. ನಿನ್ನೆಯಿಂದ ಸಾಕಷ್ಟು ಇದರ ಬಗ್ಗೆ ವಾದವಿವಾದಗಳು ಆಗಿವೆ. ಅದು ಸಾಕಷ್ಟು ಎಂದು ನಾನು ತಿಳಿದುಕೊಂಡಿದ್ದೆ, ಆದ ಕ್ಕೋಸ್ಕರ ನಾನು ಭಾಷಣ ಮಾಡಲಿಲ್ಲ. ಆದರೆ ಮಾನ್ಯ ಸದಸ್ಯರುಗಳಾದ ಶ್ರೀಮಾನ್ ದೇಶಪಾಂಡೆಯವರೆ, ಶ್ರೀಮಾನ್ ಯಡಿಯೂರಪ್ಪನವರು ಶ್ರೀಮಾನ್ ಖರ್ಗೆಯವರು ಶ್ರೀಮಾನ್ ಸಿಂಧ್ಯಾರವರು ಶ್ರೀಮಾನ್ ಬಂಗಾರಪ್ಪನವರು ಹಾಗೂ ಶ್ರೀಮಾನ್ ಕೌಜಲಗಿಯವರು ಇದರಲ್ಲಿ ಭಾಗಿಗಳಾಗಿದ್ದಾರೆ. ಅವರು ಹಲವಾರು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಮೊಟ್ಟಮೊದಲಿಗೆ ಈ ತಿದ್ದುಪಡಿ ಏನು ತಂದಿದೆಯೆ, ಇದರ ಕಲಂ ೨೭೨ (ಎ)ನಲ್ಲಿ ತರಲೇಬೇಕಾಗಿತ್ತು, ಕಾರಣ ಏನೆಂದರೆ ಇದು ಮಾಸ್‌ಲೇನಿಯಸ್ ಸೆಕ್ಷನ್, ಕಲಂ ೫ರಲ್ಲಿ ಇದನ್ನು ತರಬೇಕಾಗಿತ್ತು, ಎಂದು ತಾವು ಹೇಳಿದ್ದೀರಿ. ಅದು ಪಂಚಾಯ್ತಿಗಳ ಘಟನೆಗಳ ಬಗ್ಗೆ. ಆದರಲ್ಲಿ ನಾವು ತರುವುದಕ್ಕಾಗುವುದಿಲ್ಲ. ಆದ್ದರಿಂದ ಈ ಒಂದು

ಸೆಕ್ಷನ್ ಅಳವಡಿಸಿಕೊಂಡು ತಿದ್ದುಪಡಿ ತಂದಿದ್ದೇವೆ. ಆದ್ದರಿಂದ ಮಾನ್ಯ ಸದಸ್ಯರುಗಳು ಎತ್ತಿರತಕ್ಕಂಥ ವಾದ ಸರಿಯಲ್ಲವೆಂದು ವಿನಯಪೂರ್ವಕವಾಗಿ ಹೇಳುತ್ತೇನೆ. ಮತ್ತೆ ಭಾಷಣ ಮಾಡುವಾಗ ಹಲವಾರು ಪ್ರಶ್ನೆಗಳನ್ನು ಎತ್ತಿದ್ದಾರೆ ವಿಕೇಂದ್ರೀಕರಣದ ಬಗ್ಗೆ ಬಸವಲಿಂಗಪ್ಪನವರಿಗೆ ವಿಶ್ವಾಸ ಇದೆಯೇ ಇಲ್ಲವೋ ಎನ್ನುವುದರ ಬಗ್ಗೆ ತಾವು ಮಾತನಾಡಿದ್ದೀರಿ. ನಾನು ಮಂತ್ರಿಯಾದಾಗಿನಿಂದ ಇವತ್ತಿನವರೆಗೂ ನನ್ನ ಅಭಿಪ್ರಾಯಗಳನ್ನು ನಾನು ಹೇಳೇ ಇಲ್ಲ. ನಾನು ಅಭಿಪ್ರಾಯಗಳನ್ನು ಕೊಡಿ ಎಂದು ಸಾರ್ವಜನಿಕರಿಗೆ, ಜಿಲ್ಲಾ ಪರಿಷತ್ ಅಧ್ಯಕ್ಷರುಗಳಿಗೆ, ಉಪಾಧ್ಯಕ್ಷರುಗಳಿಗೆ, ಹಾಗೂ ಮಾನ್ಯ ಸದಸ್ಯರುಗಳಿಗೆ.

ಶ್ರೀ ಆರ್. ಎಲ್. ಜಾಲಪ್ಪ.— ಕಳೆದ ನಾಲ್ಕು ತಿಂಗಳಿಂದ ಹೇಳಿದ್ದು ಯಾರ ಅಭಿಪ್ರಾಯ.

ಶ್ರೀ ಬಿ. ಎಸ್. ಯಡಿಯೂರಪ್ಪ.— ಅವರ ಮನಸ್ಸಿನಲ್ಲಿದ್ದನ್ನು ಜನರ ಬಾಯಿಂದ ಹೇಳಿಸತಕ್ಕ ಪ್ರಯತ್ನ ಮಾಡಿದ್ದಾರೆ.

ಶ್ರೀ ಆರ್. ವಿ. ದೇಶಪಾಂಡೆ.— ಎಲ್ಲಾ ಜಿಲ್ಲಾಪರಿಷತ್ ಅಧ್ಯಕ್ಷರುಗಳು ನಾಲ್ಕು ಸಾರಿ ಬಂದು ಮುಖ್ಯಮಂತ್ರಿಗಳನ್ನು ಭೇಟಿ ಮಾಡುವಂಥ ಪರಿಸ್ಥಿತಿಯನ್ನು ಇವರು ನಿರ್ಮಾಣ ಮಾಡಿದರು.

ಶ್ರೀ ಬಿ. ಬಸವಲಿಂಗಪ್ಪ.— ಅದಕ್ಕೆ ನನ್ನನ್ನು ತಪ್ಪು ತಿಳಿದುಕೊಂಡು, ಕೆಲವು ಜಿಲ್ಲಾ ಪರಿಷತ್ ಅಧ್ಯಕ್ಷರುಗಳು, ಉಪಾಧ್ಯಕ್ಷರುಗಳು ಟೀಕೆ ಮಾಡಿದ್ದಾರೆ. ನಾನು ಅವರ ಗೋಜಿಗೇ ಹೋಗಿಲ್ಲ. ಕಾರಣ ಏನೆಂದರೆ, ತಿಳುವಳಿಕೆ ಇಲ್ಲದೆ ಮಾತನಾಡತಕ್ಕವರಿಗೆ ಪ್ರತಿಯಾಗಿ ಉತ್ತರ ಕೊಡತಕ್ಕಂಥಾದ್ದು ಸರಿಯಲ್ಲ. ಈಗ ಏನು ಆಕ್ಟ್ ಇದೆ, ಕಾನೂನು ಮಾಡಿದ್ದೇವೆ, ಈ ಕಾನೂನು ನಾನಲ್ಲ ಮಾಡಿದ್ದು, ಹಿಂದಿನವರು ಮಾಡಿದ್ದಾರೆ, ಯಾರು ಅಂದರೆ ನೀವು ಮಾಡಿದ್ದು. ನಾನು ಬೆರಳು ತೋರಿಸಿ ಹೇಳುತ್ತಿದ್ದೇನೆ ಇದರ ಪ್ರಕಾರ ಏನೇನು ಅವರಿಗೆ ಅಧಿಕಾರ ಕೊಟ್ಟಿದ್ದೀರಿ, ಅದು ಬರುವುದಿಲ್ಲ ಎನ್ನುವುದರ ಬಗ್ಗೆ ನಾನು ತಿಳುವಳಿಕೆ ರೂಪದಲ್ಲಿ ಬೇಳಿದ್ದೇನೆ. ತಿಳುವಳಿಕೆ ರೂಪದಲ್ಲಿ ಹೇಳಿದ್ದನ್ನು ತಾವು ದೊಡ್ಡದಾಗಿ ಆಕಾಶಚಿತ್ತರಕ್ಕೆ ತೆಗೆದುಕೊಂಡು ಹೋಗಿ ವ್ಯಾಖ್ಯಾನ ಮಾಡಿದ್ದಾರೆ. ನನಗೆ ಇದರಲ್ಲಿ ನಂಬಿಕೆಯಿಲ್ಲ ಎಂಬ ವಾತಾವರಣವನ್ನು ಹೇಳಿದ್ದಾರೆ. ನನಗೆ ಇದರಲ್ಲಿ ಅತೀವವಾಗಿ ನಂಬಿಕೆ ನನಗೆ ಉಂಟು. ಆದರೆ ಈ ಕಾನೂನು ಮಾಡಿರತಕ್ಕ ನಿಮಗೆ ನಂಬಿಕೆ ಇದೆಯೋ, ಇಲ್ಲವೋ ಎಂಬ ಸಂಶಯ ಬರುವ ರೀತಿಯಲ್ಲಿ ಕಾನೂನು ಮಾಡಿದ್ದೀರಿ. ಇದರ ಪ್ರಕಾರ ಯಾರಿಗೂ ಅಧಿಕಾರ ಕೊಟ್ಟಿಲ್ಲ. ಜಿಲ್ಲಾ ಪರಿಷತ್ ಅಧ್ಯಕ್ಷರುಗಳಿಗೆ ಹೆಚ್ಚಿನ ಅಧಿಕಾರ ಕೊಡಬೇಕೆನ್ನುವುದು ನನ್ನ ಇಚ್ಛೆ, ೧೯೮೭ನೇ ಇಸವಿಯಲ್ಲಿ ೧೬ೆರ ಸೆಕ್ಷನ್ ಪ್ರಕಾರ ಕಾನೂನು ಮಾಡಿ ಸ್ವಲ್ಪ ಅಧಿಕಾರ ಕೊಟ್ಟಿದ್ದೀರಿ, ನಾನು ಜಿಲ್ಲಾ ಪರಿಷತ್ ಅಧ್ಯಕ್ಷರುಗಳಿಗೆ, ಅಧಿಕಾರ ಕೊಡಬೇಕೇ, ಕೊಡಬಾರದೆ ಎನ್ನುವ ಬಗ್ಗೆ ನಿಮ್ಮನ್ನೆಲ್ಲಾ ಕೇಳಿ ತಿದ್ದುಪಡಿ ತರುವ ಇಚ್ಛೆ ನನಗೆ ಇತ್ತು ಆದರೆ. ನೀವು ಮಾಡಿರತಕ್ಕ ಕಾನೂನು ಪ್ರಕಾರ ಅವರಿಗೆ ಇಲ್ಲ ಎಂದು ನಾನು ಅವರಿಗೆ ಹೇಳಿದೆ. ಮತ್ತೆ ಅಧಿಕಾರ ವಿಕೇಂದ್ರೀಕರಣ ಆಗಬೇಕು. ಈ ಅಧಿಕಾರ ಯಾರ ಕೈಯಲ್ಲಿ ಹೋಗಬೇಕು? ಈ ಕಾನೂನು ಆಡಿಯಲ್ಲಿ ಅಧಿಕಾರವೂ ಉಂಟು, ಹಣವೂ ಉಂಟು. ಕೊಟ್ಟ ಹಣವನ್ನು ಹತೋಟಿಯಲ್ಲಿ ಖರ್ಚು ಮಾಡಬೇಕು, ಬೇರೆಯವರಿಗೆ ಲೆಕ್ಕ ಕೊಡುವ ರೀತಿಯಲ್ಲಿ ಖರ್ಚು ಮಾಡಬೇಕು, ಸ್ವೇಚ್ಛೆಯಾಗಿ ಮಾಡಕೂಡದು ಈ ಅಧಿಕಾರ ಯಾರ ಕೈಯಲ್ಲಿ ಹೋಗುತ್ತೆ, ಸ್ವಾಮಿ. ನಾನು ರವಿನ್ಯೂ ಮಂತ್ರಿಯಾಗಿದ್ದೆ. ಶ್ರೀಮಾನ್ ಹುಚ್ಚಮಾಸ್ತಿಗೌಡರು ಕಂದಾಯ ಮಂತ್ರಿಗಳಾಗಿದ್ದಾಗ ಅವರ ಕಾಲದಲ್ಲಿ ಪಟೇಲರನ್ನು ಮತ್ತು ಶ್ಯಾನುಭೋಗರನ್ನು ಕಿತ್ತುಹಾಕಬೇಕೆಂದು ಶಾಸನವಾಗಿದ್ದು ನನ್ನ ಕಾಲದಲ್ಲಿ ಇತ್ಯರ್ಥವಾಯಿತು. ಇದಕ್ಕೆ ಕಾರಣವೇನೆಂದರೆ, ನಮ್ಮ ಸಮಾಜ ಏನು ಜಾತಿಗಳಿಂದ ಕೂಡಿದೆ, ಈ ಸಮಾಜ ಬದಲಾವಣೆ ಆಗಬೇಕು, ಈ ದೇಶದಲ್ಲಿ ಸಾಮಾಜಿಕ ಬದಲಾವಣೆಗಳು ಆಗಬೇಕೆಂದು ನಾನು ಚಿಕ್ಕಂದಿನಿಂದ ಇವತ್ತಿನವರೆಗೂ ಇದೇ ಹಿನ್ನೆಲೆಯಲ್ಲಿ ಹೋರಾಟ ಮಾಡುತ್ತಿದ್ದೇನೆ. ಈ ನನ್ನ ವಾದವನ್ನು ಕೆಲವರು ಒಪ್ಪುತ್ತಾರೆ, ಕೆಲವರು ಒಪ್ಪುವುದಿಲ್ಲ. ಒಪ್ಪದೇ ಇರತಕ್ಕವರು ಯಾರು ? ಜಾತಿ ವ್ಯಾಮೋಹಕ್ಕೆ ಈ ದೇಶದಲ್ಲಿ ತಲೆಬಾಗಿರತಕ್ಕ ಜನ, ನನ್ನ ವಾದವನ್ನು ಒಪ್ಪುವುದಿಲ್ಲ. ಜಾತಿಗಳು ಹೋಗಬೇಕೆಂದು ಭಾಷಣ ಮಾಡುತ್ತೀರಿ, ಆದರೆ ಜಾತಿಗಳ ಹೆಸರಿನಲ್ಲಿ ಕೆಲಸ ಮಾಡುತ್ತೀರಿ ಜೀವನ ಮಾಡುತ್ತೀರಿ. ಅಂದಮೇಲೆ ಈ ಸಮಾಜದಲ್ಲಿ ಬದಲಾವಣೆಯಾಗಿದೆಯೇ ? ಈ ಅಧಿಕಾರ ಕೇಂದ್ರಿಕೃತವಾಗಿತು ಸರ್ಕಾರದಲ್ಲಿ ಅಧಿಕಾರ ಇದ್ದುದನ್ನು ವಿಕೇಂದ್ರೀಕರಣ ಮಾಡಿದಿರಿ. ಈಗ ಅಧಿಕಾರ ಯಾರ ಕೈಯಲ್ಲಿ ಹೋಗಿದೆ ಇವೋತ್ತು ಮಂಡಲ್ ಪಂಚಾಯತ್‌ಗಳು ಎಷ್ಟು ಇವೆ ೨,೫೦೩ ಮಂಡಲ್ ಪಂಚಾಯತ್‌ಗಳಲ್ಲಿ ಯಾವ ಜನರು ಇದ್ದಾರೆಂದರೆ, ಯಾವ ಒಂದು ಹಿನ್ನೆಲೆಯಲ್ಲಿ ಪಟೇಲರನ್ನು, ಶ್ಯಾನುಭೋಗರನ್ನು ಕಿತ್ತುಹಾಕಿದಿರಿ, ಅವರ ಕೈಯಲ್ಲಿಯೇ ಈಗ ಪುನಃ ಅಧಿಕಾರ ಹೋಗಿದೆ. ಇವುಗಳ ಆಡಳಿತ

ನಿರ್ಗತಿಕರ ಕೈಯಲ್ಲಿ ಇದೆಯೇ ? ಮಂಡಲ್ ಪಂಚಾಯತಿಗಳು, ಜಿಲ್ಲಾಪರಿಷತ್‌ಗಳು ನಿರ್ಗತಿಕರ ಕೈಯಲ್ಲಿ ಇವೆಯೇನು? ವಿಕೇಂದ್ರೀಕರಣ ಅಂದರೆ ಸಮಭಾಗದಿಂದ ಅದನ್ನು ಅನುಭವಿಸತಕ್ಕಂಥ ಒಂದು ವಾತಾವರಣ ಇರಬೇಕು. ಮಾನ್ಯ ದೇಶಪಾಂಡೆಯವರ ಜೊತೆಯಲ್ಲಿ ಗುಡಿಸಿಲಿನಲ್ಲಿ ಇದ್ದು ಕೆಲಸ ಮಾಡುತ್ತಿದ್ದಾನಲ್ಲಾ, ಜೀವನ ಮಾಡುತ್ತಿದ್ದನಲ್ಲಾ ಹಾಗೂ ಬೇರೆಯವರ ಆಶ್ರಯದಲ್ಲಿ ಜೀವನ ಮಾಡುತ್ತಿದ್ದಾನಲ್ಲಾ, ಅಂತಹವನ ಕೈಯಲ್ಲಿ ಈ ಅಧಿಕಾರ ಹೋಗಬೇಕು. ಅವನು ಸಹ ಅಧಿಕಾರ ಪಡೆದು ಮಾಡಬೇಕು. A man crushed by law and religion has no hopes of power. Unless you give the power in the hands of a poor man a man who is neglected in the society, a man who is pressed fast to the ground, a man who is ignored by law and religion, he must be given power for some time to rule this country. Otherwise it will be beyond your imagination that you will effect a change in the social order. Social order is so tight, so rigid, and you cannot break this. ಇದಕ್ಕೋಸ್ಕರ ಅಧಿಕಾರ ವಿಕೇಂದ್ರೀಕರಣ ಆಗಬೇಕೆಂದು ನಾನು ಹೇಳುತ್ತಿದ್ದೇನೆ. ಅಧಿಕಾರ, ಹಣ, ಸಂಪತ್ತು ಯಾರ ಕೈಯಲ್ಲಿ ಹೋಗಬೇಕು ಜನರ ಕೈಯಲ್ಲಿ ಹೋಗಬೇಕು. ಆ ಜನರು ಯಾರು ? ಸಾವಿರಾರು ವರ್ಷಗಳಿಂದ ಅಧಿಕಾರ ಮಾಡಿ ಈ ಜನರ ಅದೃಷ್ಟವನ್ನು ತಮ್ಮ ಕೈಯಲ್ಲಿ ಇಟ್ಟುಕೊಂಡಿರುತ್ತಾರೆ ಅಂತವರಿಂದ ತೆಗೆದು ಯಾರು ತುಳಿಯಲ್ಪಟ್ಟಿದ್ದಾರೆ ಯಾರು ಈ ದೇಶದಲ್ಲಿ ವಂಚಿತರಾಗಿದ್ದಾರೋ, ಅಂತಹವರ ಕೈಯಲ್ಲಿ ಅಧಿಕಾರ ಹೋಗಬೇಕು. ಇಂತಹ ನತದೃಷ್ಟರ ಕೈಗೆ ಅಧಿಕಾರವನ್ನು ಕೊಡುವಂತಹ ಒಂದು ವಾತಾವರಣ ಈ ದೇಶದಲ್ಲಿ ಸೃಷ್ಟಿಯಾಗಬೇಕು. ಶ್ರೀಮಾನ್ ಬಂಗಾರಪ್ಪನವರು ಸಹ ಇದೇ ಮಾತನ್ನು ಹೇಳಿದರು. ಯಾರು ಹಿಂದುಳಿದವರು ಇದ್ದಾರೆ, ಯಾರು ನಿರ್ಗತಿಕರು ಇದ್ದಾರೆ, ಯಾರು ವಂಚಿತವರ್ಗದವರು ಇದ್ದಾರೆ ಅಂತಹವರ ಕೈಯಲ್ಲಿ ಅಧಿಕಾರ ಕೊಟ್ಟು, ಅಧಿಕಾರ ಹಂಚಿಕೊಂಡು ಅನುಭವಿಸದೇ ಹೋದರೆ ಈ ದೇಶದಲ್ಲಿ ಒಳ್ಳೆಯದನ್ನು ನಿರ್ಮಾಣ ಮಾಡಲಿಕ್ಕೆ ಆಗುವುದಿಲ್ಲ. ಇದು ನನ್ನ ಸ್ಪಷ್ಟವಾದ ಮಾತು. ತಾವೆಲ್ಲರೂ ಒಪ್ಪಿದರೆ ಇಂತಹ ಒಂದು ಕಾಯಿದೆಯನ್ನು ಇಂತಹ ಒಂದು ಶಿಲ್ಪುಪಡಿಯನ್ನು ಈ ಒಂದು ಕಾನೂನಿಗೆ ತಂದು ಎಲ್ಲ ಅಧಿಕಾರವನ್ನು ವಿಕೇಂದ್ರೀಕರಣ ಮಾಡಿ ಯಾರು ನಿರ್ಗತಿಕ ಜನರು ಇದ್ದಾರೆ, ಅವರ ಕೈಯಲ್ಲಿ ಅಧಿಕಾರ ಹೋಗುವಂಥ ವ್ಯವಸ್ಥೆ ಮಾಡುವಂಥಾದ್ದು ಆಗಬಹುದು ಮಾನ್ಯ ಸಿಂಧ್ಯ, ಅವರು ರೊಟೇಷನ್ ಪದ್ಧತಿ ಜಾರಿಗೆ ಬರಬೇಕೆಂದು ಹೇಳಿದರು. ಯಾರೋ ಒಬ್ಬ ಮನುಷ್ಯ ಮದ್ರಾಸ್ ಸಿಟಿಯಲ್ಲಿ ಮೇಯರ್ ಆದರೆ, ಮುಂದೆ ಯಾರು ಮೇಯರ್ ಆಗಬೇಕೆಂದು ಹೇಳಿ ಮೊದಲೇ ನಿಗದಿ ಮಾಡುತ್ತಾರೆ, ಈ ರೊಟೇಷನ್ ಪದ್ಧತಿ ಮದ್ರಾಸ್ ಸಿಟಿಯಲ್ಲಿದೆ. ಅವನ್ನು ಅಧಿಕಾರಕ್ಕೆ ಬಂದಾಗ ನಿರ್ಗತಿಕ ಮನುಷ್ಯ ಅಧಿಕಾರದಲ್ಲಿದ್ದಾಗ ನೋಡಿ ನಲಿದು ಸಂತೋಷ ಪಡತಕ್ಕ ವಾತಾವರಣ ಮದ್ರಾಸಿನಲ್ಲಿ ಸೃಷ್ಟಿಯಾಗಿದೆ ಅಲ್ಲಿ ಈ ಒಂದು ಮೂವ್‌ಮೆಂಟ್ ಪ್ರಾರಂಭವಾಯಿತು. ಆದರೆ ಇಲ್ಲಿ ಏನಾಗಿದೆ ಇಲ್ಲಿ ಚಳುವಳಿ ಯಾವರೀತಿ ಆಗುತ್ತಿದೆ ಎಂದರೆ, ಯಾರನ್ನೋ ಕಬ್ಬನ್ ಪಾರ್ಕಿಗೆ ಹಿಡಿದುಕೊಂಡು ಬರುವುದು, ಅವರೆಲ್ಲರಿಂದಲ್ಲೂ ಸರ್ಕಾರದ ವಿರುದ್ಧ ಭಾಷಣ ಮಾಡಿಸುವುದು; ಅದನ್ನು ನಾನು ಚಳುವಳಿ ಎಂದು ಹೇಳುವುದಿಲ್ಲ. ನಾನು ವಿನಯಪೂರ್ವಕವಾಗಿ ಕೈ ಜೋಡಿಸಿ ಬೇಡಿಕೊಳ್ಳುತ್ತಿದ್ದೇನೆ. ಈ ಸಮಾಜದಲ್ಲಿರತಕ್ಕ ಏರುಪೇರುಗಳನ್ನು ತೆಗೆದುಹಾಕಿ ಸಮಭಾವನೆ ಮತ್ತೆ ಸಮಾನ ಒಂದು ಸ್ಟೇಟಸ್ ಅಂದರೆ ಎಲ್ಲರೂ ಒಂದೇ ರೀತಿ, ಎಲ್ಲರೂ ಸಮಾನರು ಎನ್ನುವ ವಾತಾವರಣವನ್ನು ಸೃಷ್ಟಿ ಮಾಡಬೇಕು ಆ ರೀತಿ ಮಾಡಿದರೆ ಮಾನ್ಯ ದೇಶಪಾಂಡೆಯವರು ಹೇಳಿದ್ದನ್ನು ನಾನು ಕೇಳುತ್ತೇನೆ. ಇವೊತ್ತು ವಿಕೇಂದ್ರೀಕರಣದ ಬಗ್ಗೆ ಮಾನ್ಯ ಪಾರ್ಲಿಯಮೆಂಟರು ಸಹ ಹೇಳಿದರು. ಇವೊತ್ತು ವಿಕೇಂದ್ರೀಕರಣ ಆಗಿದೆ, ಅಧಿಕಾರ ಆಯಿತು, ಇವೊತ್ತು ಒಬ್ಬೊಬ್ಬ ಮಂಡಲ ಪ್ರಧಾನರ ಕೈಯಲ್ಲಿ, ಒಬ್ಬೊಬ್ಬ ಸೆಕ್ರೆಟರಿಯವರ ಕೈಯಲ್ಲಿ ೨೫ ಲಕ್ಷ ರೂಪಾಯಿ ಹಣ ಇದೆ ಮೈಸೂರು ತಾಲ್ಲೂಕಿನಲ್ಲಿ ಹೋಗಿ ನೋಡಿದರೆ ತಮಗೆ ಗೊತ್ತಾಗುತ್ತದೆ. ಯಾವ ಒಬ್ಬ ಮನುಷ್ಯ ಸತತವಾಗಿ ಅಧಿಕಾರವಲ್ಲಿದ್ದಾನೆ, ಯಾರು ನಾನು ಮೇಲ್ಜಾತಿ ಎಂದು ಹೇಳಿ ದುರಹಂಕಾರದಿಂದ ತಿರುಗಾಡುತ್ತಿದ್ದಾನೆ ಅಂತಹವನ ಕೈಯಲ್ಲಿ ಇವೊತ್ತಿನ ದಿವಸ ಹಣ ಇದೆ, ಅಧಿಕಾರ ಇದೆ, ನಾನು ಹೇಳುತ್ತೇನೆ, ದಯಮಾಡಿ ಕೇಳಿ. ನಿಮಗೆ ಅನುಕಂಪ ಇರಬಹುದು ಅದು ಬೇರೆ ವಿಚಾರ. ನನ್ನ ಭಾಷಣ ಆದರೂ ಕೇಳಿ.

೨-೦೦ ಪಿ. ಎಂ.

ಶ್ರೀ ಬಿ. ಎಸ್. ಯಡಿಯೂರಪ್ಪ :— ನೀವು ಹೇಳುವುದನ್ನು ನಾವು ಕೇಳುತ್ತೇವೆ. ಅದೇ ರೀತಿ ನಾವು ಹೇಳುವುದನ್ನೂ ನೀವು ಸ್ವಲ್ಪ ಕೇಳಬೇಕು. ಮಾನ್ಯ ಬಸವಲಿಂಗಪ್ಪನವರ ಕಳಕಳಿ ಬಗ್ಗೆ